ವಿಜಯಪುರ | ಸಂಪುಟ 04 | ಸಂಚಿಕೆ 040 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಮಂಗಳವಾರ, ಮಾರ್ಚ್, 31, 2026



" ನಮ್ಮ ಭಾವನೆಗಳನ್ನು ಮಕ್ಕಳ ಮೇಲೆ ಹೇರುವುದರ ಬದಲಾಗಿ, ಅವ-ರಿಗೆ ಮುಕ್ತವಾಗಿ ಮಾತನಾಡಲು ಅವಕಾಶ ಕೊಡಿ, ಆಗ ಮಕ್ಕಳ ಬಣ್ಣ ಬಣ್ಣದ ಕನಸುಗಳು ಬಿಟ್ಟುಕೊಳ್ಳಲು ಪ್ರಾರಂಭಿಸುತ್ತವೆ. ಅವರ ಆಶಯ, ಆಸಕ್ತಿಯನ್ನು ಗುರುತಿಸಿ ಪೋಷಿಸಿದರೆ ಅಚ್ಚರಿಯ ಪಲಿತಾಂಶ ನಿರೀಕ್ಷಿಸಲು ಸಾಧ್ಯ."

■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು
ಕರ್ನಾಟಕ ಬಾಲ ವಿಕಾಸ ಅಕಾಡೆಮಿ

ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ಹರಿದ 2 ಟಿಎಂಸಿ ನೀರು | ಶಾಸಕ ಲಕ್ಷ್ಮಣ ಸವದಿ ಭಗೀರಥ ಪ್ರಯತ್ನಕ್ಕೆ ಸಿಕ್ಕ ಫಲ

## ಕೃಷ್ಣೆಗೆ ಹರಿದು ಬಂದ ಮಹಾರಾಷ್ಟ್ರದ ಜೀವಜಲ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ತೀವ್ರ ಬೇಸಿಗೆಯ ಬಿಸಿಲ ಬೇಗೆಯಿಂದ ಕಂಗೆಟ್ಟಿದ್ದ ಅಥಣಿ ಮತಕ್ಷೇತ್ರದ ಜನತೆ ಹಾಗೂ ರೈತ ಸಮುದಾಯಕ್ಕೆ ಈಗ ಸಮಾಧಾನದ ಸುದ್ದಿ ಸಿಕ್ಕಿದೆ. ಮಹಾರಾಷ್ಟ್ರದ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ಸುಮಾರು 2 ಟಿಎಂಸಿ ನೀರು ಹ-ರಿದು ಬರುತ್ತಿದ್ದು, ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಇತ್ತೀಚೆಗೆ ಪ್ವರಗಿ ಬ್ಯಾರೇಜ್‌ನ ಗೇಟ್ ಮು-ರಿದು ನೀರು ಕೆಳಭಾಗಕ್ಕೆ ಹರಿದು ಹೋಗಿದ್ದ-ರಿಂದ, ಅಥಣಿ ಭಾಗದಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಅಭಾವ ಎದುರಾಗುವ ಭೀತಿ ಎದುರಾಗಿತ್ತು. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡ ಅಥಣಿ ಶಾಸಕ ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳಾದ ಲಕ್ಷ್ಮಣ ಸವದಿ ಅವರು, ರೈತರ ಮೇಲಿನ ಅಪಾರ ಕಾಳಜಿಯಿಂದ ತಕ್ಷಣ ಕಾರ್ಯಪ್ರವೃತ್ತರಾದರು.ಮಹಾರಾಷ್ಟ್ರ ಸರ್ಕಾರದ ಹಿರಿಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಸಚಿವರೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ಕೃಷ್ಣಾ ನದಿಗೆ ನೀರು ಬಿಡುವಂತೆ ಮನವರಿಕೆ ಮಾಡಿಕೊಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಸವದಿ ಅವರ ಈ ಭಗೀರಥ ಪ್ರಯತ್ನದ ಫಲವಾಗಿ 2 ಟಿಎಂಸಿ ನೀರು ಈಗ ನದಿಗೆ ಹರಿದು ಬರುತ್ತಿದೆ. ಇದರಿಂದ ಈ ಭಾಗದ ನದಿ ತೀರದ ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ನೀಗುವುದರ ಜೊತೆಗೆ, ಜಾನುವಾರುಗಳಿಗೂ ಆಸರೆಯಾದಂತಾಗಿದೆ.

ಶಾಸಕರ ಈ ಸಮಯೋಚಿತ ನಿರ್ಧಾರ ಮತ್ತು ರೈತಪರ ಕಾಳಜಿಗೆ ಅಥಣಿ ಮತಕ್ಷೇತ್ರದ ಸಾರ್ವಜನಿಕರಿಂದ ಹಾಗೂ ರೈತ ಸಂಘಟನೆಗಳಿಂದ ವ್ಯಾಪಕ ಶ್ಲಾಘನೆ ವ್ಯಕ್ತವಾಗುತ್ತಿದೆ.

ಎಲ್‌ಪಿಜಿ ಒತ್ತಡ ನಿವಾರಣೆಗೆ ಕೇಂದ್ರದ ತುರ್ತು ಕ್ರಮ | ಸೀಮೆಎಣ್ಣೆ ನಿಯಮ ಸಡಿಲಿಸಿದ ಕೇಂದ್ರ ಸರ್ಕಾರ

## ಪೆಟ್ರೋಲ್ ಪಂಪ್ ಮೂಲಕ ಸೀಮೆಎಣ್ಣೆ ಮಾರಾಟಕ್ಕೆ ಅವಕಾಶ!

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಎಲ್‌ಪಿಜಿ (ಐಕಲು) ಸರಬರಾಜಿನಲ್ಲಿ ಉಂಟಾಗಿರುವ ಒತ್ತಡವನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರ ತುರ್ತು ಕ್ರಮವನ್ನು ಕೈಗೊಂಡಿದೆ.

ಸೀಮೆಎಣ್ಣೆಯ ನಿಯಮಗಳನ್ನು ಸಡಿಲಗೊಳಿಸಿರುವ ಕೇಂದ್ರ ಸರ್ಕಾರ, ಸಾರ್ವಜನಿಕ ವಿತರಣಾ ವ್ಯವಸ್ಥೆ (PDS) ಮತ್ತು ಪೆಟ್ರೋಲ್ ಪಂಪ್‌ಗಳ ಮೂಲಕ ಗೃಹಬಳಕೆಗೆ ಮಾರಾಟ ಮಾಡಲು ಅವಕಾಶ ನೀಡಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಮಾರ್ಚ್ 29 ರಂದು ಅಡುಗೆ ಅನಿಲ ಐಕಲು ಮೇಲಿನ ಒತ್ತಡವನ್ನು ಕಡಿಮೆ ಮಾಡಲು 60 ದಿನಗಳವರೆಗೆ ಮಾರಾಟಕ್ಕೆ ಅವಕಾಶ ನೀಡುವ ಅಧಿಸೂಚನೆಯನ್ನು ಪ್ರಕಟಿಸಿದೆ.

ಈ ಕ್ರಮವು ಹೆಚ್ಚಿನ ಎಲ್‌ಪಿಜಿ ಬೇಡಿಕೆ ಹಾಗೂ ಸರಬರಾಜಿನ ಸಮಸ್ಯೆಯ ನಡುವೆ ಮನೆಮಾಳಿಗಳಿಗೆ ಬದಲಿ ಅಡುಗೆ ಇಂಧನವನ್ನು ಒದಗಿಸಲು ನೆರವಾಗಲಿದೆ.

ಕೇಂದ್ರ ಅಧಿಕಾರಿಗಳ ಪ್ರಕಾರ, ಈ ಹಿಂದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಉನ್ನತ ಸೀಮೆಎಣ್ಣೆ ತೈಲ ಮುಕ್ತ (ಕಆಖ ಖಎಔ) ಎಂದು ಘೋಷಿಸಲ್ಪಟ್ಟ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಆಖ ಸೀಮೆಎಣ್ಣೆಯನ್ನು ತಾತ್ಕಾಲಿಕವಾಗಿ ಮತ್ತೆ ಪರಿಚಯಿಸುವುದಾಗಿ ತಿಳಿಸಲಾಗಿದೆ.

ಎಲ್ಪಿಜಿ ಕೊರತೆಗಳನ್ನು ಎದು-ರಿಸುತ್ತಿರುವ ಮನೆಗಳು ಮೂಲಭೂತ ಗೃಹಬಳಕೆಯ ಅಗತ್ಯಗಳಿಗೆ ಅಗತ್ಯವಾದ ಇಂಧನವನ್ನು ನಿರಂತರ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಈ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಹೇಳಿದೆ.

ಪೆಟ್ರೋಲ್ ಪಂಪ್‌ಗಳು ಮನೆಯ ಅಡುಗೆ ಮತ್ತು ಬೆಳಕಿನ ಅಗತ್ಯಗಳಿಗೆ ಬೇಕಾಗುವಷ್ಟು ಸೀಮಿತ ಪ್ರಮಾಣದ ಸೀಮೆಎಣ್ಣೆಯನ್ನು ಸಂಗ್ರಹಿಸಲು ಮತ್ತು ವಿತರಿಸಲು ಈ ಹೊಸ ನಿಯಮಗಳ ಅಡಿಯಲ್ಲಿ ಅನುಮತಿಸಲಾಗುವುದು ಎಂದು ತಿಳಿಸಲಾಗಿದೆ.



### ಕೇಂದ್ರ ಸರ್ಕಾರಕ್ಕೆ ವಿನಂತಿಸಿ ಪತ್ರ



"ರಾಜ್ಯದಲ್ಲಿ ಎಲ್‌ಪಿಜಿ ಸಿಲಿಂಡರ್ ಕೊರತೆಯನ್ನು ಎದುರಿಸಲು ವಿದೇಶಗಳಿಂದ ಅನಿಲವನ್ನು ಆಮದು ಮಾಡುವುದೂ ಸೇರಿದಂತೆ ಪರ್ಯಾಯ ಕ್ರಮಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವನ್ನು ವಿನಂತಿಸಿ ಪತ್ರ ಬರೆದಿದ್ದೇವೆ."

■ ಸಿದ್ದರಾಮಯ್ಯ
ಮುಖ್ಯಮಂತ್ರಿ



ಎಲ್‌ಪಿಜಿ ಹಂಚಿಕೆ ಶೇ.68ಕ್ಕೆ ಹೆಚ್ಚಳ"ರಾಜ್ಯದಲ್ಲಿ ಎಲ್‌ಪಿಜಿ ಕೊರತೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನೀಡುತ್ತಿದ್ದ ಎಲ್‌ಪಿಜಿ ಹಂಚಿಕೆಯನ್ನು ಶೇ.68ಕ್ಕೆ ಹೆಚ್ಚಿಸಿದ್ದು, ಇದೀಗ ಅಗತ್ಯ ಹಾಗೂ ಆದ್ಯತೆಗೆ ತಕ್ಕಂತೆ ವಿತರಣೆಯನ್ನು ಆರಂಭಿಸಲಾಗಿದೆ."

■ ಕೆ.ಹೆಚ್.ಮುನಿಯಪ್ಪ
ಆಹಾರ ಮತ್ತು ನಾಗರಿಕ ಸರಬರಾಜು ಸಚಿವ

## ಎ.2 ರಂದು ಹಳ್ಳಿ ಮೋಟಾರ್ಸ್‌ನಲ್ಲಿ ಎಲೆಕ್ಟ್ರಿಕ್ ಸ್ಕೂಟರ್ ಬಿಡುಗಡೆ

■ ಉದಯರಶ್ಮಿ ದಿನಪತ್ರಿಕೆ



ಜೇರಟಗಿ: ಭಾರತದ ನಂಬರ್ 1 ಎಲೆಕ್ಟ್ರಿಕ್ ಸ್ಕೂಟ-ರ್ ಈಗ ಜೇವರಗಿ ತಾಲೂಕಿನ ಜೇರಟಗಿಯಲ್ಲಿ ಎ.02 ರಂದು ಬಿಡುಗಡೆಯಾಗಲಿದೆ.

ಅಂದು ಜೇರಟಗಿಯ ಹಳ್ಳಿ ಮೋಟಾರ್ಸ್ ಶೋರೂಂ ನಲ್ಲಿ ನಡೆಯುವ ಸಮಾರಂಭದಲ್ಲಿ ಪರಿಸರಸ್ನೇಹಿ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಈ ಕ್ರಾಂತಿಕಾರಿ ಸ್ಕೂಟರ್‌ಗಳನ್ನು ಬಿಡುಗಡೆ ಮಾಡಲು ಅತಿಥಿಗಳಾಗಿ ಶ್ರೀಮತಿ ಶ್ವೇತಾ ಅಜಯ್ ಸಿಂಗ್ ಜಿ ಹಾಗೂ ಬಾಹ್ಯಾಕಾಶ ತಂತ್ರಜ್ಞಾನಿ – ISRO ವಿಜ್ಞಾನಿ ಶ್ರೀಮತಿ ಪದ್ಮಾ ಕೃಷ್ಣ ಕುಲಕರ್ಣಿ ಆಗಮಿಸುತ್ತಿದ್ದಾರೆ. ಸ್ಥಳೀಯ ಗಣ್ಯರೂ ಸಹ ಪಾಲ್ಗೊಳ್ಳಲಿರುವ ಈ ಕಾರ್ಯಕ್ರಮದಲ್ಲಿ ಸರ್ವರೂ ಭಾಗವಹಿಸಬೇಕೆಂದು ಹಳ್ಳಿ ಮೋಟರ್ಸ್ ಮಾಲಿಕ ಸುನೀಲ ಹಳ್ಳಿ ಅವರು ಪ್ರಕಟಣೆ ಮೂಲಕ ಕೋರಿದ್ದಾರೆ. ಬಾಹ್ಯಾಕಾಶದ ವೇಗ, ಭೂಮಿಯ ಮೇಲಿನ ಭರವಸೆಯಾಗಿರುವ ನಿಮ್ಮ ನೆಚ್ಚಿನ ಹೀರೋ ಎಲೆಕ್ಟ್ರಿಕ್ ಸ್ಕೂಟರ್‌ಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಮತ್ತು ಬುಕಿಂಗ್‌ಗಾಗಿ ಸಂಪರ್ಕಿಸಲು ಹಳ್ಳಿ ಮೋಟಾರ್ಸ್, ಜೇರಟಗಿ ಸಂಪರ್ಕ ಸಂಖ್ಯೆಗಳು: 6363328245, 9731234123, 9845672129

## ರೈತರ ಜಮೀನುಗಳಿಗೆ ಏಕರೂಪದ ದರಕ್ಕೆ ಆಗ್ರಹಿಸಿ ರೈತರ ಸಂಘ & ಡಿಎಸ್‌ಎಸ್ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಜಾಲವಾದ ಗ್ರಾಮದ ರೈತರ ಜಮೀನುಗಳಿಗೆ ಏಕದರ ನಿಗದಿಮಾಡಿ ಖರೀದಿಸುವಂತೆ ಆಗ್ರಹಿಸಿ ರೈತರ ಸಂಘ ಹಾಗೂ ಡಿಎಸ್‌ಎಸ್ ಪದಾಧಿಕಾರಿಗಳು ಪ್ರತಿಭಟನೆ ಕೈಗೊಂಡರು.

ಗ್ರಾಮದ ರೈತರ ಧರಣಿ ಸ್ಥಳಕ್ಕೆ ಭೇಟಿ ನೀಡಿದ ಉತ್ತರ ಕರ್ನಾಟಕ ರೈತರ ಸಂಘದ ರಾಜ್ಯಾಧ್ಯಕ್ಷ ಶಂಕರಗೌಡ ಹಿರೇಗೌಡ ಮಾತನಾಡಿ, ಜಾಲವಾದ ಗ್ರಾಮದಲ್ಲಿ ಹ-ರಿಯಾಣ ಮೂಲದ ಆರ್‌ಇಝುಡ್ ಟ್ರಾನ್ಸಮಿಷನ್ ಸೋಲಾರ್ ಪಾರ್ಕ್ ಲಿಮಿಟೆಡ್ ಕಾರ್ಪೊರೇಟ್ ಕಂಪನಿಯು ರೈತರಿಗೆ ನಿಗದಿತ ಏಕರೂಪದ ಬೆಲೆ ನೀಡದೆ ವಂಚಿಸಿದೆ. ಈ ಕಂಪನಿಯು ತನ್ನ ನೀತಿಗಳಿಗೆ ಅನುಗುಣವಾಗಿ ನಿಗದಿತ ಅರ್ಹತಾ ಮಾನದಂಡಗಳಿಗೆ ಒಳಗೊಂಡಂತೆ ಕರ್ನಾಟಕ ರಾಜ್ಯದಲ್ಲಿ ಬಿಆರ್‌ಐಜೆ ಯೋಜನೆಗೆ ರೈತರ ಭೂಮಿ ಖರೀದಿಸಿ ಸ್ಥಳೀಯ ನಿರಾಶ್ರಿತ-ರಿಗೆ ಪ್ರತಿಯೊಂದು ಕುಟುಂಬಕ್ಕೆ ತಮ್ಮ ಕಂಪನಿಯಲ್ಲಿ ಉದ್ಯೋಗ ನೀಡುತ್ತೇವೆ ಎಂದು ಸರ್ಕಾರಿ ನಿಯಮಗಳ ಪ್ರಕಾರ ದೃಢಪಡಿಸಿ, ಈಗ ಸ್ಥಳೀಯ ರೈತರಿಗೆ ಅನ್ಯಾಯ ಮಾಡಿದೆ. ರಾಜ-ಕೀಯ ಬಲ ಮತ್ತು ಕಾನೂನಿನ ಅರಿವುಳ್ಳ ರೈತರಿಗೆ ಪ್ರತಿ ಎಕರೆಗೆ 28 ರಿಂದ 30 ಲಕ್ಷ ರೂಪಾಯಿ ಕೊಟ್ಟು ಜಮೀನು ಖರೀದಿಸಿದೆ. ಆದರೆ ಅಮಾಯಕ ರೈತರಿಗೆ 15 ರಿಂದ 16 ಲಕ್ಷಗಳಿಗೆ ಏಜೆಂಟಗಳ ಮೂಲಕ ಭೂಮಿ ಖರೀದಿಸಿ ವಂಚಿಸಿದೆ. ಆದ್ದರಿಂದ ಕೂಡಲೇ ಅಮಾಯಕ ರೈತರಿಗೆ ಪ್ರತಿ ಎಕರೆಗೆ 35 ಲಕ್ಷ ಕೊಟ್ಟು ಖರೀದಿಸಬೇಕು. ಒಂದು ವೇಳೆ ಸಮಸ್ಯೆ ಬಗೆಹ-ರಿಸದ್ದಿದರೆ ಮುಂದಿನ ದಿನಗಳಲ್ಲಿ ಈ ಹೋರಾಟ ಉಗ್ರ ರೂಪದ ಸ್ವರೂಪ ಪಡೆದುಕೊಳ್ಳುತ್ತದೆ ಎಂದು ಎಚ್ಚರಿಕೆ ನೀಡಿ, ಆಗ್ರಹಿಸಿದರು.

ತಾಲ್ಲೂಕು ಘಟಕದ ನೂತನ ಡಿಎಸ್‌ಎಸ್ ಸಂಚಾಲಕ ಸಿದ್ದಾರ್ಥ ರೂಗಿ, ಪಟ್ಟಣ ಪಂಚಾಯಿತಿ ನಾಮ ನಿರ್ದೇಶಿತ ಸದಸ್ಯ ಸುನೀಲ ಕನಮಡಿ, ಶಾಂತಾಬಾಯಿ ನೀರಲಗಿ, ಶಂಕರ ನಾಯ್ಕೋಡಿ, ಪ್ರಕಾಶ ನಾಯ್ಕೋಡಿ, ಅಲ್ಲಾಭಕ್ಷ್ ಇನಾಮದಾರ, ಮಲ್ಲಿಕಾರ್ಜುನ ನಾಯ್ಕೋಡಿ, ಮಾಳಪ್ಪ ನೀರಲಗಿ, ಸಾಯಬಣ್ಣ ಕಣ್ಣಿ, ಮುದಕಪ್ಪ ಮುಳಸಾವಳಗಿ ಇದ್ದರು.




## ಬಿರುಗಾಳಿಗೆ ಬಿದ್ದ ಸೋಲಾರ ಫಲಕ :ಅಪಾರ ಹಾನಿ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ಭಾರಿ ಬಿರುಗಾಳಿಗೆ ಸೋಲಾರ ಫಲಕ ಬಿದ್ದು ಹಾನಿಯಾಗಿರುವ ದುರ್ಘಟನೆ ತಾಲ್ಲೂಕಿನ ನಿಂಬಾಳ ಬಿ ಕೆ ಗ್ರಾಮದಲ್ಲಿ ನಡೆದಿದೆ. ಶನಿವಾರ ಬೀಸಿದ ಭಾರಿ ಬಿರು ಗಾಳಿಗೆ ತಾಲೂಕಿನ ನಿಂಬಾಳ ಬಿಕೆ ಗ್ರಾಮದ ರೈತ ಮಹಿಳೆ ಸುನೀತಾ ಜಗದೇವ ರಾಠೋಡ ಅವರು ಅಳವಡಿಸಿರುವ ಸೋಲಾರ ಫಲಕ ಬಿದ್ದು ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ತನ್ನ ಎರಡು 5 ಎಕರೆ ಜಮೀನಿನಲ್ಲಿ ಕೃಷಿ ಕೆಲಸಕ್ಕೆ ಸೋಲಾರ ಫಲಕ ಅಳವಿಡಿಸಿದ್ದು , ಅದು ಬಿರುಗಾಳಿಗೆ ಬಿದ್ದು ಹಾನಿಯಾಗಿದೆ. ಇದು ಮತ್ತೆ ನಿರ್ಮಿಸಿ ಕೊಳ್ಳಲು ನನಗೆ ಕಷ್ಟ ಸಾಧ್ಯ. ಅದಕ್ಕಾಗಿ ಸರಕಾರ ಪರಿಸಡಿಕೊಳ್ಳಲು ಪರಿಹಾರ ನೀಡಬೇಕು ಎಂದು ರೈತ ಮಹಿಳೆ ಮನವಿ ಮಾಡಿದ್ದಾರೆ.

## ರೋಣಿಹಾಳ 110 ಕೆವಿ ಮಾರ್ಗ ನಿರ್ವಹಣೆ: ಇಂದು ವಿದ್ಯುತ್ ವ್ಯತ್ಯಯ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ತಾಲೂಕಿನ ರೋಣಿಹಾಳ 110 ಕೆವಿ ವಿದ್ಯುತ್ ಮಾರ್ಗಗಳ ಮಾಸಿಕ ನಿರ್ವಹಣಾ ಕಾಮಗಾರಿಯ ಹಿನ್ನೆಲೆಯಲ್ಲಿ ಮಾ.29 ರವಿವಾರ ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಈ ಅವಧಿಯಲ್ಲಿ ವಿದ್ಯುತ್ ಉಪಕೇಂದ್ರಗಳಿಂದ ಹೊರಹೋಗುವ ಎಲ್ಲಾ 11 ಕೆವಿ ಮಾರ್ಗಗಳಿಗೆ ವಿದ್ಯುತ್ ಸರಬರಾಜು ವ್ಯತ್ಯಯ ಉಂಟಾಗಲಿದೆ ಎಂದು ಹೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೀಗಾಗಿ ಸಾರ್ವಜನಿಕರು ಸಹಕರಿಸುವಂತೆ ಮನವಿ ಮಾಡಲಾಗಿದೆ.

# ಒಬ್ಬಂಟಿ ಜೀವಗಳ ತೊಳಲಾಟಗಳು



■ ಉದಯರಶ್ಮಿ ದಿನಪತ್ರಿಕೆ

**ಭಾವರಶ್ಮಿ**

**"ನಗುವಿರಲಿ ಅಳುವಿರಲಿ**
**ಎರಡನ್ನು ನಂಬೆ**
**ನಗೆ ನಂಜು**
**ಅಳು ಮಂಜು**
**ಇದ್ದಿತು ಎಂಬೆ "**

ಎಂದು ವರಕವಿ ದ. ರಾ. ಬೇಂದ್ರೆ ಅವರು ಒಂದು ಕಡೆ ಹೇಳುವ ಹಾಗೆ, ಇದೇ ಪರಿಸ್ಥಿತಿ ಈಗಿನ ಒಬ್ಬಂಟಿ ಜೀವಗಳನ್ನು ಕಾಡುತ್ತಿದೆ.

ಯಾರನ್ನು ನಂಬಬೇಕೋ ಯಾರನ್ನು ನಂಬಬೇಡವೋ ಯಾವುದು ಬೇಕು ಯಾವುದು ಬೇಡಾ ಹೀಗೆ ಸಾಗುತ್ತದೆ ತೊಳಲಾಟಗಳ ತುಡಿತ.

ಒಂಟಿ ಜೀವಗಳ ಜೀವನ ಹೇಗಿರಬಹುದೆಂಬುದನ್ನು ನಾವು ಕಲ್ಪಿಸಿಕೊಳ್ಳಬೇಕಾಗಿಲ್ಲ. ನಮ್ಮ ಸುತ್ತ ಮುತ್ತಲೇ ಹಲವಾರು ಉದಾಹರಣೆಗಳು ಕಾಣಸಿಗುತ್ತವೆ.

ಎಲ್ಲರನ್ನು ಹೊಂದಿಕೊಂಡು ಹೊಂದಿಸಿಕೊಂಡು ಹೋಗುವ ಮನಸುಗಳಿದ್ದರೆ ಒಂಟಿತನ ಸ್ವಲ್ಪವಾದರೂ ಕರಗೀತು.

ಆದರೆ ಹೆಚ್ಚು ಶಿಸ್ತು, ನೇರ ನಡೆ ಅಥವಾ ಜಗಳುಗಂಟಿತನ ಇವಾವುದೇ ಇದ್ದರೂ ಇಂತವರಿಗೆ ಜೀವನ ಸಾಗಿಸೋದು ಬಹಳ ಕಷ್ಟ.

ಅಲ್ಲೊಂದು ಅಜ್ಜಿ ಇದ್ದಾರೆ. ದೊಡ್ಡ ಮನೆ. ಅದರಲ್ಲಿ ಅವರೊಬ್ಬರೆ. ಶಿಸ್ತಿನ ಸಿಪಾಯಿ. ಅಷ್ಟೇ ಜಿಪುಣಿ ಕೂಡಾ. ಪತಿ ಮರಣ ಹೊಂದಿದ್ದಾರೆ. ಒಂದೇ ಊರಿನಲ್ಲಿರುವ ಮಕ್ಕಳು ಮಾತನಾಡಿಸುತ್ತಿಲ್ಲ. 'ಕೆಲಸಕ್ಕೆ ಬರುವವರು ಏನಾದರು ಪ್ಲಾನ್ ಮಾಡಿ ಕಳ್ಳತನ ಮಾಡಿಬಿಟ್ಟರೆ?' ಎಂಬ ಭಯದಲ್ಲಿ "ನನ್ನ ಮೊಮ್ಮಗ ರಾತ್ರಿ ಬಂದು ಬೆಳಗ್ಗೆ ಹೋಗ್ತಾನಮ್ಮ"





ಎಂದು ಕೆಲಸದವರ ಹತ್ತಿರ ಹೇಳ್ಕೊತ್ತಾರೆ.

"ರೀ ಮಾಯಾ, ನಾ ಏನಾದ್ರು ವಾಕ್ ಬರಲಿಲ್ಲ ಅಂದ್ರೆ, ಈಚೆ ಕಾಣಿಸಲಿಲ್ಲ ಅಂದ್ರೆ, ಬಂದು ಮನೆ ಬಾಗಿಲು ತಟ್ಟಿ ನೋಡಿ ಪ್ಲೀಸ್" ಎಂದು ಮುಂದಿನ ಮನೆಯ ಅಂಟಿಯಲ್ಲಿ ವಿನಂತಿಸಿಕೊಳ್ಳುತ್ತಾರೆ.

ಇಷ್ಟೆಲ್ಲಾ ಆಗಬೇಕಾದರೆ ಆ ಅಜ್ಜಿಯ ಮನಸಿನಲ್ಲಿ ಎಂಥೆಂತ ಯೋಚನೆಗಳು ಹೊಯ್ದಾಡಿದ್ದಿರಬೇಕು?

ಅದೆಷ್ಟು ಒಬ್ಬಂಟಿ ಘಳಿಗೆಗಳು ಘನಘೋರವಾಗಿ ಕಾಡಿದ್ದಿರಬೇಕು?

ಮತ್ತೊಂದು ಮನೆಯ ಆಂಟಿಯ ಮಗ ತಾನು ಕೆಲಸದ ನಿಮಿತ್ತ ದೂರದಲ್ಲಿರುವುದರಿಂದ ಮನೆಯಲ್ಲಿ ಏನೂ ಹೆಚ್ಚಿಗೆ ಕೆಲಸವಿಲ್ಲದಿದ್ದರೂ, ಕೆಲಸದವರನ್ನು ಇಟ್ಟಿದ್ದಾನೆ.

"ಮನೆಯಲ್ಲಿ ಅಷ್ಟೇನು ಕೆಲಸ ಇಲ್ಲಾ ಕಣೊ, ನಾನೇ ಮಾಡಿಕೊಳ್ತೀನಿ" ಎಂದು ಆಂಟಿ ಹೇಳಿದರೆ, "ಅಮ್ಮಾ, ಮನೆಯಲ್ಲಿ ಯಾರೂ ಇಲ್ಲ. ಏನಾದರು ಹೆಚ್ಚು ಕಡಿಮೆ ಆದ್ರೂ ಗೊತ್ತಾಗೋಲ್ಲ. ಂಣಟಜಭಿಣ ಕೆಲಸದವರಾದರೂ ದಿನಕ್ಕೊಮ್ಮೆ ಬಂದು ಹೋಗಲಿ" ಎನ್ನುತ್ತಾನೆ.

ಆ ಕೆಲಸದಾಕೆ ಮನೆಕೆಲಸಕ್ಕಿನ್ನ ಹೆಚ್ಚಾಗಿ ಆ ಆಂಟಿಯ ಮನದ ಮಾತಿಗೆ ಕಿವಿಯಾಗಿ, ಆಂಟಿಯ ಮಾತಿಗೆ ಮಾತಾಗಿ ಹೋಗಿದ್ದಾಳೆ.

ಇಷ್ಟೆಲ್ಲಾ ಕೆಲಸದಾಕೆಯ ಜೊತೆಗೆ ಮಾತನಾಡಬೇಕಾದರೆ ಆ ಅಂಟಿಯ ಮನದಲ್ಲಿ ಮಾತಿನ ರೂಪ ಪಡೆಯದ ಅದೆಷ್ಟು ಮಾತುಗಳಿರಬಹುದು? ಕೆಲಸದಾಕೆಯ ಹತ್ತಿರ ಮಾತನಾಡುವ ಮಾತು ಒಂದು ಪರಿಮಿತಿಯೊಳಗೆ ಬಂದು ಮುಗಿದುಹೋಗುತ್ತದೆ. ಎಷ್ಟೇ ಆದರೂ ಪರರು ಮನೆಯವರಾಗಲಾರರು ಅಲ್ವಾ? ಹಾಗಾಗಿ ಇನ್ನೂ ಅದೆಷ್ಟೋ ಮಾತುಗಳು ಮನದೊಳಗೇ ಮುದುಡಿಹೋಗುತ್ತವೆ.

ಹೆಂಗಸರಾದರೆ ಹೇಗೋ ಸ್ವಲ್ಪ ಹೊಂದಿಕೊಳ್ಳಬಹುದೇನೋ. ಆದರೆ ಪುರುಷರದು ಹಾಗಲ್ಲವೇ ಅಲ್ಲ.

ಗಂಡಸರ ಒಬ್ಬಂಟಿತನದ ಪರಿಣಾಮ ಮತ್ತೊಂದು ರೀತಿ. ತುಂಬಾ ಪುರುಷರ ಮಾತುಗಳು ಕ್ರಿಯೆಯ ರೂಪ ಪಡೆದುಬಿಡುತ್ತವೆ. ಒಳಗೆ ಸ್ವಾಭಿಮಾನ, ಹೊರಗೆ ಬಿಗುಮಾನ.

ಒಬ್ಬ ಮಡದಿ ಕಳೆದುಕೊಂಡ ನಿವೃತ್ತ ತಂದೆಯನ್ನು ಮಗನೇ ಕರೆದುಕೊಂಡು ಹೋಗಿ ಜೊತೆಯಲ್ಲಿ ಇಟ್ಟುಕೊಂಡ, ಆದರೆ ಆ ತಾತ ಮನೆಯಲ್ಲಿ ತಾನು ಹೇಳಿದ ಮಾತೇ ನಡೆಯಬೇಕು ಎಂಬ ಒಣದರ್ಪವನ್ನು ತೋರಿಸಿ ಮಗ-ಸೊಸೆ ವಿಚ್ಛೆದನ ಪಡೆಯುವ ಮಟ್ಟಿಗೆ ಮಾಡಿಬಿಟ್ಟರು. ಕೊನೆಗೆ ಆ ಮಗ ಅಪ್ಪನನ್ನು ವೃದ್ಧಾಶ್ರಮಕ್ಕೆ ಸೇರಿಸಿ ಮತ್ತೊಂದು ಮದುವೆಯಾದ. ಆ ತಾತ, ತನ್ನ ಮಗ ತನ್ನನ್ನು ವೃದ್ಧಾಶ್ರಮದಲ್ಲಿರಿಸಿದ ಎಂಬುದನ್ನೇ ಎಲ್ಲರ ಹತ್ತಿರ ಹೇಳಿಕೊಂಡು ಬರುತ್ತಾ ಇದ್ದಾರೆ. ಹೀಗೂ ಆಗುವ ಸಾಧ್ಯತೆಗಳಿವೆ.

**ತಿರುತಿರುಗಿ ತಿರುಗುತ್ತೆ ಬುಗುರಿ ತಾನೇ ಸೋತು**
**ತಿರೆಗುರುಳುವುದು ತನ್ನ ಬಲವ ತಾಂ ಕಳೆದು**
**ನರನುಮಂತೆಯೆ ಸುತ್ತಿ ಕಡೆಗೊಂದು ದಿನ**
**ತೆರುವನಸ್ಥಿಯ ಧರೆಗೆ – ಮಂಕುತಿಮ್ಮ**
**ಅಂದರೆ**



"ಒಂದು ಬುಗುರಿಗೆ ಚಾಟಿಯನ್ನು ಸುತ್ತಿ ಜೋರಾಗಿ ತಿರುಗಿಸಿದಾಗ, ಅದು ನಾವು ಕೊಟ್ಟ ಜೋರು ಕಡಿಮೆಯಾಗುವತನಕ ಸುತ್ತುತ್ತದೆ. ಜೋರು ಕಡಿಮೆಯಾಗುತ್ತಾ ತನ್ನ ತಿರುಗುವ ವೇಗವನ್ನು ಕಡಿಮೆ ಮಾಡಿಕೊಂಡು ನಿಧಾನವಾಗಿ ಸುತ್ತುತ್ತಾ ಕೆಳಗೆ ಬೀಳುತ್ತದೆ. ಹಾಗೆಯೇ ಮನುಷ್ಯನೂ ಸಹ ಶಕ್ತಿಯಿರುವವರೆಗೂ ಸುತ್ತಿ

ಸುತ್ತಿ ಏನನ್ನೋ ಸಾಧಿಸಬೇಕೆಂದು ಓಡಿ ಓಡಿ ಶಕ್ತಿಯೆಲ್ಲ ಕುಂದಿ ಧರೆಗೆ ಬಿದ್ದು, ಸಾವನ್ನಪ್ಪಿ ತನ್ನ ದೇಹವನ್ನು ಈ ಧರೆಗೇ ಒಪ್ಪಿಸುತ್ತಾನೆ" ಎಂಬ ಡಿವಿಜಿಯವರ ಮಾತಿನಂತೆ, ಈ ಮೇಲಿನ ಉದಾಹರಣೆಗಳು, ಕಡೆಯ ಹಂತ ತಲುಪಿದ ಹಿರಿಕರ ವಿಷಯಗಳಾದವು. ಇನ್ನು ಚಿಕ್ಕವರ ಒಬ್ಬಂಟಿತನ ಇನ್ನೂ ಶೋಚನಿಯ.

ಯಾರಿಗೂ ಹೇಳಿಕೊಳ್ಳಲಾಗದ ಅಥವಾ ಹೇಳಿಕೊಂಡರೂ ಪರಿಹಾರ ಸಿಗದ ತನ್ನ ಮನೆಯ ಕೆಲವು ವಿಷಯಗಳು ಕೆಲವು ಮಕ್ಕಳ ಒಬ್ಬಂಟಿ ವರ್ತನೆಗೆ ಕಾರಣವಿರಬಹುದು.

ತನಗೆ ಗಾಸಿಪ್ ಮಾಡಲು ಬರುವುದಿಲ್ಲ ಅಂತಲೊ ಇಲ್ಲಾ ಇತರರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿ ತನ್ನ ಮಾತಿಗೆ ಇಲ್ಲಾ ಎಂತಲೋ, ತನಗೆ ಯಾರೂ ಪ್ರಾಮುಖ್ಯತೆ ಕೊಡುತ್ತಿಲ್ಲ, ತನ್ನ ಬಗ್ಗೆ ಯಾರಲ್ಲೂ ಆದ-'ರಗಳೇ ಇಲ್ಲಾ, ಎಲ್ಲರೂ ತನ್ನನ್ನು ಕಡೆಗಣಿಸುತ್ತಾರೆ ಎಂದು ಕೊರಗುವ ಅದೆಷ್ಟೋ ಮನಸುಗಳು ತಮ್ಮೊಳಗೆ ಒಂಟಿತನವನ್ನು ಮೌನವಾಗಿಯೇ ಅನುಭವಿಸುತ್ತಿರುತ್ತವೆ. ಸಾಯಲೂ ಆಗದೆ ಬದುಕಲೂ ಆಗದೆ ಮೇಲೆ ನಗುಮುಖದ ಪರದೆ ಹಾಕಿಕೊಂಡು ಹೇಗೋ ಹಾಗೆ ಜೀವನ ಮುಂದುವರೆಸುತ್ತಿರುತ್ತವೆ. ಇಂತಹವರು ಕೆಲಸಮಯ ಡಿಪ್ರೇಷನ್ ಗೆ ಸಹ ಹೋಗುವ ಸಾಧ್ಯತೆಗಳಿರುತ್ತವೆ. ಇನ್ನಾ ಕೆಲವರು ಆತ್ಮಹತ್ಯೆಯ ದಾರಿಯನ್ನು ಸಹ ಹಿಡಿದುಬಿಡಬಹುದು.

ತಮಗೆ ಆಸಕ್ತಿ ಇರುವ ಪ್ಯಾಷನ್ ಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು, ಗ್ರಂಥಾಲಯಕ್ಕೆ ಹೋಗಿ ಓದುವುದು, ಅದಕ್ಕೆಂದೇ ಇರುವ ಸಮಾಜಸೇವಾ ಸಂಘಗಳು, ಮಾತಿನ ಕಟ್ಟೆ, ಯೋಗ ಕ್ಲಾಸು, ಇವುಗಳಿಗೆ ಸೇರಿಕೊಳ್ಳುವುದು, ಜನರೊಂದಿಗೆ ಸಂಪರ್ಕದಲ್ಲಿರಲು ಪ್ರಯತ್ನಿಸುವುದು, ಹೀಗೆ ಏನಾದರೂ ಒಂದು ಅಭ್ಯಾಸಗಳಲ್ಲಿ ಇಂತಹವರು ತಮ್ಮನ್ನ ತಾವು ಬಲವಂತವಾಗಿಯಾದರೂ ತೊಡಗಿಸಿಕೊಂಡು, ಕಷ್ಟಪಟ್ಟಾದರೂ ಸರಿಯೇ ಇಷ್ಟಪಟ್ಟು ಜೀವನವನ್ನು ಸಹ್ಯ ಮಾಡಿಕೊಂಡುಬಿಡಬೇಕು.

ಲೇಖನ
■ **ರಶ್ಮಿ ಕೆ. ವಿಶ್ವನಾಥ್**
**ಮೈಸೂರು**



## ನೈತಿಕ ಮೌಲ್ಯಗಳಿಲ್ಲದ ಕೌಶಲ್ಯಕ್ಕೆ ಯಾವುದೇ ಮಹತ್ವವಿಲ್ಲ: ನ್ಯಾ.ಸಿ.ಎಂ.ಜೋಶಿ

ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು ತನ್ನ ವಾರ್ಷಿಕ ಸಾಂಸ್ಕೃತಿ-ಕ, ಕ್ರೀಡಾ ಮತ್ತು ನವೀನತಾ ಉತ್ಸವವಾದ ಅಂಕುರ್-2026 ಅನ್ನು ಆಚರಿಸಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಗೌರವಾನ್ವಿತ ನ್ಯಾಯಮೂರ್ತಿ ಸಿ. ಎಂ. ಜೋಶಿ (ಕರ್ನಾಟಕ ಹೈಕೋರ್ಟ್ ಮಾಜಿ ನ್ಯಾಯಾಧೀಶರು) ಅವರು, "ವಿದ್ಯಾರ್ಥಿಗಳು ನಮ್ಮ ದೇಶದ ಯುವ ನಾಯಕರಾಗಿದ್ದಾರೆ. ವಿದ್ಯಾರ್ಥಿಗಳಿಗೆ ಸೃಜನಶೀಲತೆ ಅಗತ್ಯವಾಗಿದೆ. ಅದು ನಮ್ಮ ಜೀವನದಲ್ಲಿ ಮುನ್ನಡೆಸುತ್ತದೆ. ಇದು ನಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ನಮ್ಮ ವೃತ್ತಿಯನ್ನು ರೂಪಿಸುತ್ತದೆ. ನಮ್ಮ ದೇಶವನ್ನು ನವೀನ ಚಿಂತಕರು ಮುನ್ನಡೆಸುತ್ತಿದ್ದಾರೆ. ಇಂದಿನ ಭಾರತ ಅವಕಾಶಗಳನ್ನು ಕೇಳುವುದಿಲ್ಲ, ಅದು ವಿಶ್ವವನ್ನು ಮುನ್ನಡೆಸುತ್ತಿದೆ," ಎಂದು ಹೇಳಿದರು.

ಅವರು ಮುಂದುವರೆದು, "ಭಾರತದ ಜನಸಂಖ್ಯೆ, ಪ್ರಜಾಪ್ರಭುತ್ವ ವ್ಯವಸ್ಥೆ, ಸಂಸ್ಕೃತಿ, ನಾಯಕತ್ವ ಮತ್ತು ಡಿಜಿಟಲ್ ವೇದಿಕೆಗಳು ವಿಶ್ವವನ್ನು ಮುನ್ನಡೆಸುವ ಶಕ್ತಿಗಳು. ನಮ್ಮ ದೇಶದಲ್ಲಿ ಪ್ರತಿಭಾವಂತರಿದ್ದಾರೆ, ಆದರೆ ನಾವು ಆ ಪ್ರತಿಭೆಯನ್ನು ಸಮನ್ವಯಗೊಳಿಸಬೇಕು. ಸಿಯುಕೆ ಅಂಕುರ್ ಉತ್ಸವವು ನವೀನ ಆಲೋಚನೆಗಳನ್ನು ಅಕಾಡೆಮಿಕ್ ಕ್ಷೇತ್ರದಲ್ಲಿ ಸಾಧಿಸಲು ಪ್ರಮುಖ ವೇದಿಕೆಯಾಗಿದೆ. ಇದು ದೇವರ ಆಶೀರ್ವಾದದಂತಹ ಕಾರ್ಯಕ್ರಮ," ಎಂದು ಹೇಳಿದರು.

ಕುಲಪತಿ ಪ್ರೊ▯▯. ಬಟ್ಟು ಸತ್ಯನಾರಾಯಣ ಅವರು, "ವಿಕಸಿತ ಭಾರತ-2047 ಸಾಧನೆಯಲ್ಲಿ ವಿದ್ಯಾರ್ಥಿಗಳು ಪ್ರಮುಖ ಪಾತ್ರವಹಿಸುತ್ತಾರೆ. ಅಗಪಿ ಅಂಕುರ್ ಉತ್ಸವವು ವಿದ್ಯಾರ್ಥಿಗಳ ಪ್ರತಿಭೆ ಮತ್ತು ನವೀನತೆಯನ್ನು ಪ್ರದರ್ಶಿಸುವ ಮಾದರಿಯಾಗಿದೆ. ಸಿಯುಕೆ ಒಂದು 'ಮಿನಿ ಇಂಡಿಯಾ' ಆಗಿದೆ. ಇಲ್ಲಿ ವಿವಿಧ ಭಾಷಾ ಮತ್ತು ಸಂಸ್ಕೃತಿಯ ವೈವಿಧ್ಯತೆ ಇದೆ. ಪ್ರತಿಭಾವಂತ ವಿದ್ಯಾರ್ಥಿಗಳ ಮೂಲಕ ಸಿಯುಕೆ ವಿಕಸಿತ ಭಾರತ-2047 ಗುರಿಗೆ ಕೊಡುಗೆ ನೀಡುತ್ತಿದೆ," ಎಂದು ಹೇಳಿದರು.

## ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕರ್ನಾಟಕ ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾದ ಯು.ನಿಸಾರ ಅಹಮದ್ ಅವರು ವಿಜಯಪುರ ಜಿಲ್ಲಾ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಏಪ್ರಿಲ್ 05 ರಂದು ಹುಬ್ಬಳ್ಳಿಯಿಂದ ಬೆಳಿಗ್ಗೆ 8 ಗಂಟೆಗೆ ಹೊರಟು ಮಧ್ಯಾಹ್ನ 12 ಗಂಟೆಗೆ ವಿಜಯಪುರಕ್ಕೆ ಆಗಮಿಸಿ ಅಂದು ವಾಸ್ತವ್ಯಮಾಡುವರು.

ಏಪ್ರಿಲ್ 6ರಂದು ಬೆಳಿಗ್ಗೆ 10:30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸುವರು.ಅಂದು ಮಧ್ಯಾಹ್ನ 3:30ಕ್ಕೆ ನಗರದ ಅಫಜಲಪುರ ಟಕ್ಕೆನಲ್ಲಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಯಲ್ಲಿ ಸ್ಥಳೀಯ ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಣೆ ನಡೆಸುವರು. ಸಂಜೆ 4:30 ರಿಂದ ಅಲ್ಪಸಂಖ್ಯಾತರ ಮಹಿಳೆಯರು ಮತ್ತು ಸ್ಥಳೀಯ ಮಹಿಳಾ ಅಧಿಕಾರೇತರ ಸಂಸ್ಥೆಗಳಿಗೆ ಸಾಕ್ಷರತೆಯ ಪ್ರೇರೇಪಿಸಲು ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿರುವರು.ಏಪ್ರಿಲ್ 7ರಂದು ಬೆಳಿಗ್ಗೆ 10:30ಕ್ಕೆ ಸ್ಥಳೀಯ ಹಿಂದುಳಿದ ಪ್ರದೇಶಗಳಲ್ಲಿರುವ ಅಂಗನವಾಡಿ,ಉರ್ದು ಶಾಲೆಗಳು ಮತ್ತು ಸ್ಥಳೀಯ ಅಲ್ಪಸಂಖ್ಯಾತರ ಸಂಸ್ಥೆಗಳಿಗೆ ಭೇಟಿ ನೀಡಿ, ಮಧ್ಯಾಹ್ನ 3 ಗಂಟೆಗೆ ಗದಗ ಜಿಲ್ಲೆಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆಗೆ ತಿಳಿಸಿದೆ.

## ಚಿದಂಬರ ಸೇವಾ ಸಮಿತಿ ಪದಾಧಿಕಾರಿಗಳ ಆಯ್ಕೆ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ವಿಪ್ರ ಸಮುದಾಯದ ಚಿದಂಬರ ಸೇವಾ ಸಮಿತಿ ಪದಾಧಿಕಾರಿಗಳ ಆಯ್ಕೆ ಅವಿರೋಧವಾಗಿ ಜರುಗಿತು.

ಪಟ್ಟಣದ ವಿಠ್ಠಲ ಮಂದಿರದ ಆವರಣದಲ್ಲಿ ಗುರುವಾರ ಜರುಗಿದ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ನರೇಂದ್ರ ನಾಡಗೌಡ, ಉಪಾಧ್ಯಕ್ಷರಾಗಿ ವೆಂಕಟೇಶ ಕುಲಕರ್ಣಿ ಹಾಗೂ ಕಾರ್ಯದರ್ಶಿಯಾಗಿ ಚಿದಂಬರ ಕುಲಕರ್ಣಿ(ಹಂಚಲಿ) ಅವಿರೋಧವಾಗಿ ಆಯ್ಕೆಯಾದರು. ಸಮಿತಿಯ ಉಳಿದ ಪದಾಧಿಕಾರಿಗಳನ್ನು ಹನುಮ ಜಯಂತಿ ದಿನದಂದು ಆಯ್ಕೆ ಮಾಡಲಾಗುವುದು ಎಂದು ಸಮಿತಿ ತಿಳಿಸಿತು.

ಸೇವಾ ಸಮಿತಿ ಮಾಜಿಅಧ್ಯಕ್ಷ ಡಾ.ಆರ್. ಆರ್.ನಾಯಿಕ್, ಪಾಂಡುರಂಗ ದೇಶಪಾಂಡೆ, ಮಾಜಿಕಾರ್ಯದರ್ಶಿ ಗುರುರಾಜ ಕುಲಕರ್ಣಿ, ಶರತ್ ಕುಲಕರ್ಣಿ, ಡಿ.ಜಿ.ದೇಶಪಾಂಡೆ, ಪ್ರಮೋದ ನಾಡಗೌಡ, ಶ್ರೀಪಾದ ಜೋಷಿ, ಸುಧೀರ ಪಾಟೀಲ, ರಾಘವೇಂದ್ರ ಕುಲಕರ್ಣಿ, ಶ್ರೀನಿವಾಸ ಕುಲಕರ್ಣಿ, ಪಿ.ಕೆ.ಕುಲಕರ್ಣಿ, ಆನಂದ ಕುಲಕರ್ಣಿ, ಶ್ರೀಧರ ನಾಡಗೌಡ ಇದ್ದರು.

# ಮುಕ್ಕೋಟಿ ದೇವರ ಸಮಾಗಮ ಹೊಂದಿದ ಶ್ರೀ ಬಲಭೀಮ

### ದೇವರನಿಂಬರಗಿಯ ಸ್ವಯಂಭೂ ಶ್ರೀ ಬಲಭೀಮ ದೇವರ ಜಾತ್ರೆ ವೈಭವ । ಭಕ್ತಿ, ಪರಂಪರೆ ಮತ್ತು ಭಾವೈಕ್ಯದ ಪ್ರತೀಕ । ಚೈತ್ರ ಮಾಸದಲ್ಲಿ ಭಕ್ತರ ಮಹಾಪೂರ

■ ಉದಯರಶ್ಮಿ ದಿನಪತ್ರಿಕೆ


■ ವರದಿ: ರಾಜಶೇಖರ ಡೋಣಜಮಠ

ಚಡಚಣ: ತಾಲೂಕಿನ ದೇವರನಿಂಬರಗಿ ಗ್ರಾಮದ ಸ್ವಯಂಭೂ ಶ್ರೀ ಬಲಭೀಮ ದೇವರ ಜಾತ್ರೆ ಚೈತ್ರ ಮಾಸದ ಪಾಡ್ಯದಿಂದ ದವನದ ಹುಣ್ಣಿಮೆ(ಚೈತ್ರ ಪೌರ್ಣಿಮೆ)ಯವರೆಗೆ ಅತಿ ವಿಜೃಂಭಣೆಯಿಂದ ನಡೆಯುತ್ತಿದ್ದು, ಸಾವಿರಾರು ಭಕ್ತರನ್ನು ಆಕರ್ಷಿಸುತ್ತಿದೆ, ಭಕ್ತರ ಮಹಾಪೂರವೇ ಹರಿದುಬರುತ್ತದೆ,ಜಾತ್ರೆಅವಧಿಯಲ್ಲಿರಾಮನವಮಿ, ಹನುಮ ಜಯಂತಿ, ಏಕಾದಶಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತವೆ. ವಿಶೇಷವಾಗಿ ಏಕಾದಶಿ ದಿನದಂದು"ಮೊಸರು ಗಡಿಗೆ" ಒಡೆಯುವ ಸಂಪ್ರದಾಯವು ಊರ ಗೌಡರ ಮನೆತನದಿಂದ ಹಿಂದಿನಿಂದಲೂ ಪಾರಂಪರ್ಯವಾಗಿ ನಡೆದುಕೊಂಡು ಬಂದಿರುವ ಪ್ರಮುಖ ಆಚರಣೆ ಆಗಿದೆ.

ಈ ದೇವಸ್ಥಾನದಲ್ಲಿ ಪೂಜೆ ಪದ್ಧತಿಗೂ ವಿಶೇಷ ಮಹತ್ವವಿದೆ. ಹೂಗಾರ ಮನೆತನದವರು ಪ್ರತಿದಿನ ಸೂರ್ಯೋದಯ ಹಾಗೂ ಸೂರ್ಯಾಸ್ತ ಸಮಯದಲ್ಲಿ ಪೂಜೆ ಸಲ್ಲಿಸುತ್ತಾರೆ. ಮಧ್ಯಾಹ್ನ ಮತ್ತು ರಾತ್ರಿ 10 ಗಂಟೆಗೆ ವೇಳೆ ಬ್ರಾಹ್ಮಣ ಅರ್ಚಕರು ಪೂಜೆಯನ್ನು ನೆರವೇ-ರಿಸುತ್ತಾರೆ. ಪ್ರತಿದಿನ ರಾತ್ರಿ 10 ಗಂಟೆಗೆ "ಶೇದಾರತಿ" ವಿಧಿಯೊಂದಿಗೆ ಪೂಜೆ ಸಮಾಪ್ತಿಯಾಗುತ್ತದೆ.

ಸ್ವಯಂಭೂ ಶ್ರೀ ಬಲಭೀಮ (ಶ್ರೀ ಹನುಮಾನ್) ದೇವರದೇವಸ್ಥಾನವೆಂದು ಪ್ರಸಿದ್ಧಿಯಾಗಿರುವ ಈ ಕ್ಷೇತ್ರವು ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶಕ್ತಿಸ್ಥಳವೆಂದು ಭಕ್ತರು ನಂಬುತ್ತಾರೆ.ಚಡಚಣ ಪಟ್ಟಣದಿಂದ ಕೇವಲ ಏಳು ಕಿಲೋಮೀಟರ್ ದೂರದಲ್ಲಿರುವುದರಿಂದ ಪ್ರತೀ ಶನಿವಾರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದರ್ಶನಕ್ಕೆ ಆಗಮಿಸುತ್ತಾರೆ.

ಈ ದೇವಸ್ಥಾನವು ಹಿಂದೂ-ಮುಸ್ಲಿಂ ಭಾವೈಕ್ಯತೆಯ ಸಂಕೇತವಾಗಿದ್ದು, ಮುಸ್ಲಿಂ ಸಮುದಾಯದವರು ಕೂಡ ಭಕ್ತಿಭಾವದಿಂದ ದೇವಾಲಯಕ್ಕೆ ಭೇಟಿ ನೀಡುತ್ತಿದ್ದು,



ದೇವರ ದರ್ಶನಕ್ಕೆ ಬರುವಾಗ ಮಾಂಸಾಹಾರ ತ್ಯಜಿಸುವ ಸಂಪ್ರದಾಯವನ್ನು ಇಂದಿಗೂ ಪಾಲಿಸುತ್ತಿದ್ದಾರೆ.

ಇತಿಹಾಸ : ತಾಲೂಕಿನ ದೇವರನಿಂಬರಗಿ ಗ್ರಾಮದಲ್ಲಿರುವ ಶ್ರೀ ಬಲಭೀಮ ದೇವರ ದೇವಸ್ಥಾನವು ಶತಮಾನಗಳ ಇತಿಹಾಸ ಹೊಂದಿದ ಪವಿತ್ರ ಕ್ಷೇತ್ರವಾಗಿದ್ದು, ದೇವಸ್ಥಾನದ ಮೂಲದಂತ ಕಥೆ, ಪೌರಾಣಿಕ ಪ್ರಕಾರ, ಕುರುಬ ಗೌಡಿಕೆ ಮನೆತನದವರು ಸಾಕಿದ ಗೋವು ಒಂದು ಹುತ್ತಕ್ಕೆ ಹಾಲುಣಿಸುತ್ತಿದ್ದುದ-ರಿಂದ ಈ ಸ್ಥಳದ ಪಾವಿ ಬೆಳಕಿಗೆ ಬಂದಿದೆ. ಗೋವುಗಳು ಪ್ರತಿದಿನ ಅಡವಿಯಲ್ಲಿ ಇರುವ ಬೇವಿನ ಮರದ ಕೆಳಗಿನ ಹುತ್ತಕ್ಕೆ ಹಾಲುಣಿಸುತ್ತಿದ್ದವು. ಈ ಅಚ್ಚರಿಯ ಘಟನೆ ಗಮನಿಸಿದ ಗೌಡನಿಗೆ ಬಲಭೀಮ ದೇವರು ಕನಸಿನಲ್ಲಿ ಕಾಣಿಸಿಕೊಂಡು ದೇವಾಲಯ ನಿರ್ಮಾಣಕ್ಕೆ ಸೂಚನೆ ನೀಡಿದನೆಂದು ಹೇಳಲಾಗುತ್ತದೆ. "ನಾನು ಇಲ್ಲಿ ಉದ್ಭವವಾಗಲು ಸಮಯ ಬೇಕು, ನನಗೆ ತೊಂದರೆ ಕೊಡಬೇಡಿ" ಎಂದು ಸೂಚನೆ ನೀಡಿದನು ಎಂದು ಹೇಳಲಾಗುತ್ತದೆ ದೇವರ ಆಜ್ಞೆಯಂತೆ ಗುಡಿಯನ್ನು ಕಟ್ಟಿಸಿ ಬಾಗಿಲು ಮುಚ್ಚಿದರೂ, ನಿಗದಿತ ಅವಧಿಗೆ ಮುನ್ನ ಅಂ-ದರೆ ದೇವರು ಹೇಳಿದ್ದು 9 ತಿಂಗಳು 9 ದಿನಗಳವರೆಗೆ ಬಾಗಿಲು ಮುಚ್ಚಲು ಆದರೆ ಕನಸಿನ ಆತುರ ಹೆಚ್ಚಾಗಿ ಪರಿಶೀಲಿಸಲು ಮುಂದಾಗಿ ಕೇವಲ 7 ತಿಂಗಳಾಗುವಷ್ಟರಲ್ಲಿ ಬಾಗಿಲು ತೆರೆಯಲ್ಪಟ್ಟ ಕಾರಣ ಶ್ರೀ ಬಲಭೀಮ ದೇವರ ಮೂರ್ತಿ ಅರ್ಧ ರೂಪದಲ್ಲಿ ಸ್ವಯಂಭೂ ರೂಪದಲ್ಲಿ ಅಲ್ಲಿ ಕಾಣಿಸಿಕೊಂಡು ನೆಲೆನಿಂತಿದ್ದಾನೆ ಎಂಬ ನಂಬಿಕೆ ಇದೆ.

ನಂತರ ಸ್ಥಳೀಯ ಜನಪದ ಕಥ-'ಗಳ ಪ್ರಕಾರ, ಕ್ರಿ.ಶ. 1480ರ ಅವಧಿಯಲ್ಲಿ ದೇ.ನಿಂಬರಗಿ ಗ್ರಾಮದ ಸಮೀಪದ ಸೂಪನೊಳ ಗ್ರಾಮದಲ್ಲಿ ಗೌಡರ ಮನೆತನದ ಧನಾಯಿ ಹಾಗೂ ಮಾಳಾಯಿ ಎಂಬ ಅತ್ತೆಸೊಸೆ ಇಬ್ಬರು ಈಗಿನ ಈ ದೇವಸ್ಥಾನವನ್ನು ನಿರ್ಮಿಸಿದ್ದಾರೆ ಎನ್ನಲಾಗುತ್ತದೆ.

ಇತಿಹಾಸದ ದಾಖಲೆಯ ಪ್ರಕಾರ, ತೆಲಸಂಗ ಪಟವರ್ಧನರು ಹಾಗೂ ಅಕ್ಕಲಕೋಟದ ಅರಸರು 1970ರ ಸುಮಾರಿಗೆ ದೇವಸ್ಥಾನದ ಆವರಣ ನಿರ್ಮಾಣ-ಕ್ಕೆ ಸಹಕಾರ ನೀಡಿದ್ದಾರೆ. ಹೈದರಾಬಾದ್ ನಿಜಾಮ ಕೂಡ ಪ್ರತಿವರ್ಷ ಜಾತ್ರಾ ಮಹೋತ್ಸವಕ್ಕೆ 64 ಪೌಂಡ್ ನೆರವು ನೀಡುತ್ತಿದ್ದನೆಂದು ಗೆಜೆಟಿಯರ್ ದಾಖಲೆಗಳಲ್ಲಿ ಉಲ್ಲೇಖವಾಗಿದೆ ಎಂದು ತಿಳಿದುಬಂದಿದೆ.

ಇನ್ನೂ, ಸಮೀಪದ ತದ್ದೇವಾಡಿ ಗ್ರಾಮವು ಪ್ರಾಚೀನ ಕಾಲದಲ್ಲಿ ಕಲ್ಯಾಣ ಚಾಲುಕ್ಯರು ಮತ್ತು ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಪ್ರಮುಖ ಕೇಂದ್ರವಾಗಿತ್ತು. ಮತ್ತು ಸಮೀಪದ ಮಹಾರಾಷ್ಟ್ರದ ಮಂಗಳವೇಡಾ ಪಟ್ಟಣವು ಕೂಡಾ ಪ್ರಮುಖ ಕೇಂದ್ರವಾಗಿತ್ತು,ಸುಮಾರು ಸಾವಿರ ವರ್ಷಗಳ ಹಿಂದೆಯೇ ಶ್ರೀ ಬಲಭೀಮ ದೇವಸ್ಥಾನವು ಪ್ರಸಿದ್ಧಿಯಾಗಿದ್ದುದಾಗಿ ಹಿರಿಯರು ಹೇಳುತ್ತಾರೆ.



ಪವಾಡ ಸದೃಶ ಘಟನೆಗಳು : ಇನ್ನೊಂದು ಪ್ರಸಿದ್ಧ ಕಥೆಯ ಪ್ರಕಾರ, ಅಕ್ಕಲಕೋಟೆಯ ಭೋಸಲೆ ಮಹಾರಾಜರಿಗೆ ಹಲವು ವರ್ಷಗಳ ಕಾಲ ಸಂತಾನವಾಗದಿದ್ದಾಗ, ಮಂಗಳವೇಡದ ಪಂತರು (ಪಂಡಿತರು) ಶ್ರೀ ಬಲಭೀಮ ದೇವರಿಗೆ ಹರಕೆ ಹೊತ್ತರೆ ಸಂತಾನಪ್ರಾಪ್ತಿ ಆಗುತ್ತದೆ ಎಂದು ಸಲಹೆ ನೀಡಿದರು. ಅದರಂತೆ ದೇ.ನಿಂಬರಗಿ ದೇವಸ್ಥಾನದಲ್ಲಿ ಹರಕೆ ಹೊತ್ತ ನಂತರ ಅವರಿಗೆ ಸಂತಾನ ಲಭಿಸಿದೆ ಎಂದು ಜನಪ್ರಚಾರವಿದೆ.

ಮುಕ್ಕೋಟಿ ದೇವರ(ಹನುಮ,ರಾಮ,ಕಾಶಿ ವಿಶ್ವನಾಥಹೀಗೆಅನೇಕಅವತಾರಿದೇವತೆಗಳ)ಸಮಾಗಮ ಹೊಂದಿದ ಶ್ರೀ ಬಲಭೀಮ(ಹನುಮಾನ) ಎಂಬ ಪ್ರಸಿದ್ಧಿ ಪಡೆದ ದೇವಸ್ಥಾನ. ಈ ದೇವಸ್ಥಾನದಲ್ಲಿ ಅನೇಕ ಪವಾಡಸದೃಶ ಘಟನೆಗಳು ನಡೆದಿವೆ ಎಂಬ ಭಕ್ತರ ನಂಬಿಕೆ ಇದೆ ಬ್ರಾಹ್ಮಣ ಸಮಾಜದ ಜಗನ್ನಾಥ ಜೋಶಿ ಕುಟುಂಬದ ಪೂರ್ವಜರು ಕಾಶಿ ಯಾತ್ರೆಗೆ ತೆರಳಲು ಬಯಸಿದಾಗ, ಬಲಭೀಮ ದೇವರು ಕಾಶಿ ವಿಶ್ವನಾಥನ ದರ್ಶನವನ್ನು ಇಲ್ಲಿಯೇ ನೀಡಿದ್ದ-ರಿಂದ ಇಂದಿಗೂ ಆ ಕುಟುಂಬದವರು ಕಾಶಿ ಕ್ಷೇತ್ರಕ್ಕೆ ತೆರಳುವುದಿಲ್ಲ ಎಂಬ ಪ್ರತೀತಿ ಇದೆ. ಈ ದೇವಸ್ಥಾನದಲ್ಲಿ ಇಷ್ಟಾರ್ಥಗಳು ಬೇಡಿಕೊಂಡವ-ರಿಗೆ, ಸಂತಾನ ಭಾಗ್ಯ ಸೇರಿದಂತೆ ಇಷ್ಟಾರ್ಥಗಳು ನೆರವೇರುತ್ತವೆ ಎಂಬ ಭಕ್ತರ ನಂಬಿಕೆ ಇದೆ.

ತಡವಲಗಾ ಗ್ರಾಮದ ಡಬ್ಲ್ಯು.ಕುಲಕರ್ಣಿ ಅವರ ಮನೆತನದ ಹಿರಿಯರು ಶ್ರೀ ಬಲಭೀಮನಿಗೆ ಹರಕೆ ಬೇಡಿಕೊಂಡಂತೆ ಅವರ ಮನೆತನದಲ್ಲಿ ಇಂದಿಗೂ 52 ಜನ ಎಮ್.ಡಿ.ಡಾಕ್ಟರ್ ಇರುವದು ದೇವರ ಪವಾಡವಲ್ಲದೆ ಇನ್ನೇನು? ಸುಮಾರು 1980 ರಿಂದ ಇಲ್ಲಿಯವರೆಗೆ ಪ್ರತಿ ವರ್ಷ ದೇವಾಲಯದ ಆವರಣ ಸೇರಿದಂತೆ ಗುಡಿಗೆ ಬಣ್ಣ ಹಾಗೂ ಅಲಂಕಾರಗಳನ್ನು ಹಾಗೂ ದ್ವಾದಶಿಯ ಅನ್ನ ಪ್ರಸಾದ ಕೂಡಾ ಮಾಡುತ್ತ ಬಂದಿದ್ದಾರೆ.

ಜಾತ್ರೆ ಅವಧಿಯಲ್ಲಿ ಪ್ರತಿದಿನ ಕೀರ್ತನೆ, ಪುರಾಣ, ಭಜನೆ, ಸಂಗೀತ ಕಾರ್ಯಕ್ರಮಗಳು ನಡೆಯುತ್ತವೆ. ದವನದ(ಚೈತ್ರ ಪೌರ್ಣಿಮೆ) ಹುಣ್ಣಿಮೆಯಂದು ಜಾತ್ರೆಗೆ ತೆರೆಬೀಳುತ್ತದೆ. ಭಕ್ತರಿಗಾಗಿ ವಸತಿ ಹಾಗೂ ಮೂಲಸೌಕರ್ಯಗಳ ವ್ಯವಸ್ಥೆಯೂ ಮಾಡಲಾಗಿದೆ.

ಒಟ್ಟಿನಲ್ಲಿ, ದೇವರನಿಂಬರಗಿಯ ಶ್ರೀ ಬಲಭೀಮ ದೇವರ ಜಾತ್ರೆ ಭಕ್ತಿ, ಪರಂಪರೆ ಮತ್ತು ಸಾಮರಸ್ಯದ ಸಂಕೇತವಾಗಿ ಪ್ರತಿವರ್ಷವೂ ಭಕ್ತರ ಮನಸೆಳೆಯುತ್ತಿದೆ,ಈ ಕ್ಷೇತ್ರವು ಉತ್ತರ ಕರ್ನಾಟಕದ ಪ್ರಮುಖ ಧಾರ್ಮಿಕ ಕೇಂದ್ರವಾಗಿ ಮಹತ್ವ ಹೊಂದಿದ ಪವಿತ್ರ ಕ್ಷೇತ್ರವಾಗಿ ಭಕ್ತರ ಆಸ್ಥಾನವಾಗಿದ್ದು, ಇಂದಿಗೂ ಅನೇಕರು ಭಕ್ತಿಯಿಂದ ಭೇಟಿ ನೀಡುತ್ತಿದ್ದಾರೆ.

# ಗಡಿ ರಕ್ಷಿಸುತ್ತಿರುವ ಸೈನಿಕರು ನಿಜ ಹೀರೋಗಳು : ಹಂಚಲಿ




■ ಉದಯರಶ್ಮಿ ದಿನಪತ್ರಿಕೆ

## ವಿಜಯಪುರದಲ್ಲಿ ಎಬಿವ್ಹಿಪಿ ಹಮ್ಮಿಕೊಂಡಿದ್ದ 'ಉಘೇ ವೀರಭೂಮಿ' ಕಾರ್ಯಕ್ರಮ

ವಿಜಯಪುರ: ಸಿನಿಮಾಗಳಲ್ಲಿ ನಟಿಸುವ ನಟ – ನಟಿಯರು ಹೀರೋಗಳಲ್ಲ. ನಿಜವಾದ ಹೀರೋಗಳೆಂದರೆ ನಮ್ಮ ದೇಶಕ್ಕಾಗಿ ಪ್ರಾಣ ಅರ್ಪಣೆ ಮಾಡಿದ ಹೋರಾಟಗಾರರು ಹಾಗೂ ದೇಶದ ಗಡಿಯಲ್ಲಿ ನಿಂತು ನಮ್ಮನ್ನು ರಕ್ಷಿಸುತ್ತಿರುವ ಸೈನಿಕರು ನಿಜವಾದ ಹೀರೋಗಳು ಎಂದು ವಾಗ್ಮಿ ಬಸವರಾಜ ಹಂಚಲಿ ಹೇಳಿದರು.

ನಗರದ ಹುತಾತ್ಮ ವೃತ್ತದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಭಗತ್ ಸಿಂಗ್ ರಾಜಗುರು ಸುಖದೇವ ಅವರ ಬಲಿದಾನ ದಿವಸದ ಅಂಗವಾಗಿ ಹಮ್ಮಿಕೊಂಡಿದ್ದ ಉಘೇ ವೀರಭೂಮಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕರಾಗಿ ಮಾತನಾಡಿದ ಅವರು, ದೇಶದ ಶ್ರೇಷ್ಠತೆ ಮತ್ತು ಪರಂಪರೆ ನಮಗೆಲ್ಲ ಪ್ರೇರಣೆ ಆಗಬೇಕು, ಈ ಮೂರು ಜನ ತರುಣರು ತಮ್ಮ ಚಿಕ್ಕ ವಯಸ್ಸಿನಲ್ಲಿ ಭಾರತ ಮಾತೆಯನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಮುಕ್ತ ಮಾಡಬೇಕೆಂದು ಕ್ರಾಂತಿಕಾರಿ ಹೋರಾಟವನ್ನು ಮಾಡಿದರು, ತಾವು ಗಲ್ಲಿಗೇರುವ ಸಮಯದಲ್ಲಿ ನಗುತ್ತಾ ಘೋಷಣೆಗಳನ್ನು ಮೊಳಗಿಸುತ್ತಾ ಭಯವಿಲ್ಲದೆ ಗಲ್ಲಿಗೇರಿದ ಮಹಾನ್ ರತ್ನಗಳು ಇವರನ್ನು ಇಂದಿನ ಯುವಕರು ಸ್ಮರಿಸಿಕೊಳ್ಳಬೇಕು. ಇವರು ನಮಗೆ ಪ್ರೇರಣೆ ಆಗಬೇಕು ಎಂದರು.

ಎಬಿವಿಪಿಯ ಕೇಂದ್ರೀಯ ಕಾರ್ಯಸಮಿತಿ ಸದಸ್ಯ ಸಚಿನ ಕುಳಗೇರಿ ಮಾತನಾಡಿ, ಸ್ವಾತಂತ್ರ್ಯ ನಂತರದ ಯುವಶಕ್ತಿ ದೇಶಕ್ಕಾಗಿ ಬದುಕುವ ಅವಶ್ಯಕತೆ ಇದೆ, ಆದರೆ ಇಂದಿನ ಯುವಕರು ಡ್ರಗ್ಸ್, ಗುಟ್ಕಾ, ಮದ್ಯಪಾನಕ್ಕೆ ದಾಸರಾಗಿ ತಮ್ಮ ಅಮೂಲ್ಯ ಶಕ್ತಿಯನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ, ಇದರಿಂದ ದೂರವಾಗಿ, ಸಶಕ್ತ, ಸದೃಢ, ಸ್ವಾಭಿಮಾನಿ ಭಾರತವನ್ನು ನಿರ್ಮಾಣ ಮಾಡುವಲ್ಲಿ ನಾವೆಲ್ಲರೂ ಪಾತ್ರರಾಗಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ ವಿಜಯಕುಮಾರ ಭಾವಿ ಮಾತನಾಡಿ ಸ್ವಾಭಿಮಾನಿ, ಸ್ವದೇಶಿ, ಭಾರತವನ್ನು ನಿರ್ಮಾಣ ಮಾಡಬೇಕು, ಅದಕ್ಕೆ ಯುವಶಕ್ತಿ ಬೆಂಬಲವಾಗಿ ನಿಂತು ವಿಶ್ವಗುರು ಭಾರತವನ್ನು ನಿರ್ಮಾಣ ಮಾಡಬೇಕು ಎಂದರು.

ಎಬಿವಿಪಿಯ ಜಿಲ್ಲಾ ಸಂಚಾಲಕ ಸಂದೀಪ ಅರಳಗುಂಡಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಾಂತ ಕಾರ್ಯಸಮಿತಿ ಸದಸ್ಯರಾದ ಡಾ. ಅಮಿತಕುಮಾರ ಬಿರಾದಾರ, ನಗರ ಕಾರ್ಯದರ್ಶಿ ಸ್ನೇಹಾ ಹಿರೇಮಠ, ವಿಭಾಗ ಸಂಘಟನಾ ಕಾರ್ಯದರ್ಶಿ ಹರ್ಷ ನಾಯಕ, ವಕೀಲರಾದ ಬಸವರಾಜ ಯಾದವಾಡ, ಸಿದ್ದು ಮದರಕಂಡಿ, ಸುರೇಖಾ ಕುಲಕರ್ಣಿ, ಮಂಜುನಾಥ ಹಳ್ಳಿ, ನಾಗೇಶ ಸಿಂಧೆ, ಸುಮಾ ಬೋಳರಡ್ಡಿ, ಓಂಕಾರ ನಾವಿ ಇತರರು ಉಪಸ್ಥಿತರಿದ್ದರು.

# ದೇವರಹಿಪ್ಪರಗಿ: ಸಂತೆ ಕರ ವಸೂಲಿಗಾಗಿ ಸಭೆ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣದ ಪಂಚಾಯಿತಿಯಲ್ಲಿ ಸಂತೆ ಕರ ವಸೂಲಿಗಾಗಿ (ಲಿಲಾವು ಗಾಗಿ) ಸಭೆ ಜರುಗಿತು.

ಪಂಚಾಯಿತಿ ಕಾರ್ಯಾಲಯದಲ್ಲಿ ಗುರುವಾರದಂದು ಅಧ್ಯಕ್ಷೆ ಜಯಶ್ರೀ ದೇವಣಗಾಂವ, ಉಪಾಧ್ಯಕ್ಷ ರಮೇಶ ಮಸಬಿನಾಳ ಮುಖ್ಯಾಧಿಕಾರಿ ಅಫ್ರೋಜ್ ಅಹ್ಮದ್ ಪಟೇಲ ಅವರ ಉಪಸ್ಥಿತಿಯಲ್ಲಿ ಜರುಗಿದ ಸಭೆಯಲ್ಲಿ ಕಳೆದ ವರ್ಷದಿಂದ ನಡೆಯದ ಇರುವ ಲಿಲಾವಿನ ಕುರಿತು ಚರ್ಚಿಸಿ ನಂತರ ಸಾರ್ವಜನಿಕರ ಸಮ್ಮುಖದಲ್ಲಿ ಭಾಗವಹಿಸಿದ ಅಬ್ದುಲ್ ಜಬ್ಬರ್ ಚೌಧರಿ ಎಂಬುವವರಿಗೆ ವಾರ್ಷಿಕ 9,05000( 9 ಲಕ್ಷ ಐದು ಸಾವಿರ) ರೂ.ಗಳಂತೆ ಲಿಲಾವು ನೀಡಲಾಯಿತು. ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕತ್ತಿ), ಕಾಶೀನಾಥ ಬಜಂತ್ರಿ, ಸಿಂಧೂರ ಡಾಲೇರ, ಹುಸೇನ್ ಕೊಕಟನೂರ, ಸಿಬ್ಬಂದಿ ಮುತ್ತುರಾಜ ಹಿರೇಮಠ, ಸೋಮು ಭೋವಿ, ಎಸ್. ಎಸ್.ಪೂಜಾರಿ, ಬಿ.ಪಿ.ಹಜೇರಿ, ನಬಿರಸೂಲ್ ಮಣೂರ, ಅಬ್ದುಲ್ ಚೌಧರಿ, ಬಾಪುಸಾಬ್ ಯಲಗಾರ, ಖಾಜಾ ಬಂದೇನವಾಜ್ ಯಲಗಾರ ಇದ್ದರು.

# ಸೆಕೆಂಡಿನ ಮಹತ್ವ ಕೂದಲೆಳೆ ಅಂತರದಲ್ಲಿ ಅಪಘಾತದಿಂದ ಪಾರಾದವನಿಗೆ ಕೇಳಿ

■ ಉದಯರಶ್ಮಿ ದಿನಪತ್ರಿಕೆ

ಕ್ರಾಂತಿಕಾರಿಗಳ ಸಾಲಿನಲ್ಲಿ ಚಾಪೆಕರ್ ಸಹೋದರರ ಹೆಸರು ಅಜರಾಮರವಾಗಿದೆ.

ಈ ಮೂರು ಮಂದಿ ಚಾಪೆಕರ್ ಸಹೋದರರು ದೇಶಕ್ಕಾಗಿ ನಗುನಗುತ್ತಲೇ ನೇಣುಗಂಬಕ್ಕೆ ಏರಿದ್ದರು. ಇದೇ ರೀತಿ ಅದೊಂದು ದಿನ ದಾಮೋದರ ಚಾಪೆಕರ್ ಅವರನ್ನು ಸರವರಾ ಜೈಲಿನಲ್ಲಿ ನೇಣಿಗೇರಿಸಲು ಬ್ರಿಟೀಷರು ಕರೆದುಕೊಂಡು ಬಂದಿದ್ದರು. ದಾಮೋದರ ಚಾಪೆಕರರು ಮಾತ್ರ ಆ ದಿನ ನಗು ಮುಖದಿಂದ ಮತ್ತು ಆನಂದದಿಂದಿದ್ದರು. ಅವರ ಕೈಯಲ್ಲಿ ಭಗವದ್ಗೀತೆಯ ಪುಸ್ತಕವಿದ್ದು, ಅವರು ಭಗವದ್ಗೀತೆಯನ್ನು ಓದುತ್ತಲೇ ನೇಣಿನ ಶಿಕ್ಷೆಗಾಗಿ ಸಿದ್ಧರಾಗಿದ್ದರು. ನೇಣುಗಂಬಕ್ಕೆ ಏರುವ ಸಮಯವಾದರೂ ಬ್ರಿಟೀಷ್ ಅಧಿಕಾರಿಗಳು ಅವರನ್ನು ನೇಣು ಕಂಬಕ್ಕೆ ಕರೆದೊಯ್ಯಲು ಬರಲೇ ಇಲ್ಲ. ಚಾಪೇಕರರು ಜೈಲಿನ ಕೋಣೆಯಲ್ಲಿ ಬ್ರಿಟೀಷ್ ಜೈಲು ಅಧಿಕಾರಿಗಳ ಆಗಮನಕ್ಕಾಗಿ ಕಾಯುತ್ತಾ ಇದ್ದರು.



ಕೊನೆಗೂ ಐದು ನಿಮಿಷ ತಡವಾಗಿ ಜೈಲಧಿಕಾರಿಗಳು ದಾಮೋದರ ಬಳಿಗೆ ಬಂದರು. ಬ್ರಿಟೀಷ್ ಜೈಲು ಅಧಿಕಾರಿಗಳ ಈ ಬೇಜವಾಬ್ದಾರಿಯನ್ನು ನೋಡಿದಂತಹ ದಾಮೋದರ ಚಾಪೇಕರ್ ಕೋಪಗೊಂಡರು. ಅವರು ಅತ್ಯಂತ ಚಾಣಾಕ್ಷತನದಿಂದ ಬ್ರಿಟೀಷ್ ಜೈಲು ಅಧಿಕಾರಿಗಳಿಗೆ ಅವರ ತಪ್ಪನ್ನು ತೋರಿಸಿಕೊಟ್ಟರು. 'ನಾನು ಯಾವ ಸಮಾಜದಿಂದ ಬಂದಿದ್ದೇನೆಯೋ ಅಲ್ಲಿನ ಜನರೆಲ್ಲರೂ ಬ್ರಿಟೀಷರೆಂದರೆ ತುಂಬಾ ಕಟ್ಟುನಿಟ್ಟಾಗಿ ಸಮಯ ಪಾಲನೆಯನ್ನು ಮಾಡುತ್ತಾರೆ ಎಂದು ತಿಳಿದಿದ್ದಾರೆ. ಆದರೆ ಇಂದು ಆ ಮಾತು ಸುಳ್ಳು ಎಂದು ತಿಳಿಯಿತು' ಎಂದು ಬ್ರಿಟೀಷ್ ಜೈಲು ಅಧಿಕಾರಿಗಳಿಗೆ ಹೇಳಿದರು.



ನೇಣಿನ ಕಂಬಕ್ಕೆ ಏರಲು ಸಿದ್ಧನಾಗಿ ನಿಂತಿದ್ದ ವ್ಯಕ್ತಿಯನ್ನೂ ಕಾಯುವಂತೆ ಮಾಡಿದ ಬ್ರಿಟೀಷ್ ಜೈಲಧಿಕಾರಿಗಳು ದಾಮೋದರ ಚಾಪೇಕರರ ಮುಂದೆ ನಾಚಿಕೆಯಿಂದ ತಲೆತಗ್ಗಿಸಿದರು.

ಸಮಯದ ಮಹತ್ವ ಕುರಿತು ತಜ್ಞರು ಈ ರೀತಿಯಾಗಿ ಹೇಳುತ್ತಾರೆ, ಒಂದು ವರ್ಷದ ಮಹತ್ವವನ್ನು ತಿಳಿಯಲು ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿಯನ್ನು ಕೇಳಬೇಕು. ಒಂದು ತಿಂಗಳ ಮಹತ್ವವನ್ನು ತಿಳಿಯಲು ಅವಧಿ ಪೂರ್ವದಲ್ಲಿ ಮಗುವಿಗೆ ಜನ್ಮ ನೀಡಿದ ತಾಯಿಯಲ್ಲಿ ಕೇಳಬೇಕು. ಒಂದು ವಾರದ ಮಹತ್ವವನ್ನು ತಿಳಿಯಲು ವಾರಪತ್ರಿಕೆಯ ಸಂಪಾದಕನನ್ನು ಕೇಳಬೇಕು. ಒಂದು ದಿನದ ಮಹತ್ವವನ್ನು ತಿಳಿಯಲು ದಿನಗೂಲಿಯನ್ನೇ ನಂಬಿರುವ ಕೂಲಿ ಕಾರ್ಮಿಕನನ್ನು ಕೇಳಬೇಕು. ಒಂದು ಗಂಟೆಯ ಮಹತ್ವ ತಿಳಿಯಲು ಆಪ್ತರಿಗಾಗಿ ಕಾಯುತ್ತಾ ಕುಳಿತಿರುವವರನ್ನು ಕೇಳಬೇಕು. ಒಂದು ನಿಮಿಷದ ಮಹತ್ವವನ್ನು ತಿಳಿಯಲು ರೈಲಿಗೆ ಟಿಕೆಟ್ ತೆಗೆದುಕೊಂಡು ರೈಲು ತಪ್ಪಿಸಿಕೊಂಡ ಪ್ರಯಾಣಿಕನನ್ನು ಕೇಳಬೇಕು. ಒಂದು ಸೆಕೆಂಡಿನ ಮಹತ್ವವನ್ನು ತಿಳಿಯಲು ಅಪಘಾತದಲ್ಲಿ ಕೂದಲೆಳೆಯಲ್ಲಿ ತಪ್ಪಿಸಿಕೊಂಡು ಬದುಕಿದವನನ್ನು ಕೇಳಬೇಕು, ಒಂದು ಮಿಲಿ ಸೆಕೆಂಡಿನ ಮಹತ್ವವನ್ನು ತಿಳಿಯಲು ಒಲಿಂಪಿಕ್ಸ್ ಕ್ರೀಡೆಯಲ್ಲಿ ಚಿನ್ನದ ಪದಕವನ್ನು ಕಳೆದುಕೊಂಡು ಬೆಳ್ಳಿ ಪದಕವನ್ನು ಪಡೆದ ಕ್ರೀಡಾಪಟುವನ್ನು ಕೇಳಬೇಕು ಎಂದಿದ್ದಾರೆ.

ಸಮಯದ ಮಹತ್ವವನ್ನು ಅರಿಯಲು ಇಷ್ಟು ಉದಾಹರಣೆಗಳು ಸಾಕು.





ಲೇಖನ
■ ಸಂತೋಷ್ ರಾವ್ ಪೆರ್ಮುಡ
ಪೆರ್ಮುಡ ಮನೆ
ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು
ದ.ಕ ಜಿಲ್ಲೆ–574198
ದೂ: 9742884160

# ಜಿಲ್ಲೆಯ ಎಲ್ಲಾ ಶೈಕ್ಷಣಿಕ ಸ್ವಂಸ್ಥೆಗಳನ್ನು ತಂಬಾಕುಮುಕ್ತಗೊಳಿಸಲು ಎಡಿಸಿ ಶಿವಾನಂದ ಕರಾಳೆ ಆದೇಶ



ಬೀದರ :ಜಿಲ್ಲೆಯ ಎಲ್ಲಾ ಶೈಕ್ಷಣಿಕ ಸಂಸ್ಥೆಗಳನ್ನು ತಂಬಾಕು ಮುಕ್ತ ಸಂಸ್ಥೆಗಳನ್ನಾಗಿ ಮಾಡಲು ಸರಕಾರದ ಖಿಂಈಇಖ ತಂತ್ರಾಂಶದಲ್ಲಿ 10 ದಿನಗಳೊಳಗಾಗಿ ನೊಂದಾಯಿಸಿ ಶೈಕ್ಷಣಿಕ ಸಂಸ್ಥೆಯ ನೂರು ಮೀಟರ್ ಅಂತರದಲ್ಲಿ ತಂಬಾಕು ಉತ್ಪನ್ನ ಮಾರಾಟ ಮಾಡುವ ಅಂಗಡಿಗಳ ವಿವರವನ್ನು ಶಾಲೆಯ ಮುಖ್ಯೋಪಾದ್ಯಯರು ಸಂಬಂದಪಟ್ಟ ಅಧಿಕಾರಿಗಳಿಗೆ ವರದಿ ನೀಡಲು ಅಪರ ಜಿಲ್ಲಾಧಿಕಾರಿ ಶಿವಾನಂದ ಕರಾಳೆ ಆದೇಶಿಸಿದರು.

ಅವರು ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕೋಟ್ಪಾ 2003ರ ಕಾಯಿದೆಯ ಅಡಿಯಲ್ಲಿ ಪ್ರತಿ ತಿಂಗಳು ತಂಬಾಕು ದಾಳಿಗಳನ್ನು ಹಮ್ಮಿಕೊಂಡು ಕನಿಷ್ಟ 20 ಪ್ರಕರಣಗಳನ್ನು ದಾಖಲಿಸಿ ತಾಲೂಕು ಮಟ್ಟದಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಪ್ರಗತಿ ಪರಿಶೀಲನೆ ನಡೆಸಿ ಯುವ ಜನತೆ ತಂಬಾಕು ಸೇವನೆಗೆ ಬಲಿಯಾಗದಂತೆ ಕ್ರಮ ವಹಿಸಬೇಕು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತಂಬಾಕು ಉತ್ಪನ್ನ ಉದ್ಯಮ ಪರವಾನಿಗೆ ನೀತಿಯನ್ನು ಅನುಷ್ಠಾನಗೊಳಿಸದ ಬಸವ ಕಲ್ಯಾಣ ಮತ್ತು ಔರಾದ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರಿಗೆ ಕಾರಣ ಕೇಳಿ ನೋಟಿಸ್ ನೀಡಲು ಸೂಚಿಸಿದರು ಹಾಗೂ ಉಳಿದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ಉದ್ಯಮ ಪರವಾನಿಗೆ ನೀತಿಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಿ ಶೈಕ್ಷಣಿಕ ಸ್ವಂಸ್ಥೆಗಳನ್ನು ತಂಬಾಕು ಮುಕ್ತಗೊಳಿಸಿಬೇಕೆಂದರು.

ಎಲ್ಲ ಬಾರ್ ಹಾಗೂ ರೆಸ್ಟೂರೆಂಟಗಳಲ್ಲಿ ಧೂಮಪಾನವಾಗದಂತೆ ಕ್ರಮವಹಿಸಲು ಅಬಕಾರಿ ಅಧಿಕಾರಿಗಳಿಗೆ ಕೋಟ್ಪಾ ಕಾಯ್ದೆಯ ತರಬೇತಿ ನೀಡಿ ಆರೋಗ್ಯ ಇಲಾಖೆ ಹಾಗೂ ಅಬಕಾರಿ ಇಲಾಖೆ ಜಂಟಿಯಾಗಿ ತಾಲ್ಲುಕುವಾರು ಬಾರ್ ಹಾಗೂ ರೆಸ್ಟೂರೆಂಟಗಳಲ್ಲಿ ದಾಳಿ ನಡೆಸಿ ಧೂಮಪಾನ ಮುಕ್ತಗೊಳಿಸಬೇಕು. ಸರಕಾರದ ಆದೇಶದಂತೆ ತಾಲೂಕುವಾರು ಗ್ರಾಮಗಳನ್ನು ಆಯ್ಕೆ ಮಾಡಿ ತಂಬಾಕು ಮುಕ್ತ ಗ್ರಾಮಗಳ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸಿ 30 ಗ್ರಾಮಗಳನ್ನು ತಂಬಾಕು ಮುಕ್ತ ಗ್ರಾಮಗಳನ್ನು ಘೋಸಿಸಲು ಕ್ರಮ ವಹಿಸಲು ಸೂಚಿಸಿದರು.

ರಾಜ್ಯ ತಂಬಾಕು ನೀಯಂತ್ರಣ ಘಟಕದ ವಿಭಾಗೀಯ ಸಯೋಂಜಕ ಮಾಹಾತೇಂಶ ಬಿ. ಉಳ್ಳಾಗಡ್ಡಿ ಮಾತನಾಡಿ, ಜಿಲ್ಲಾ ತಂಬಾಕು ನಿಯಂತ್ರಣ ಘಟಕವು ಇಲ್ಲಿಯವರೆಗೆ ಸೆಕ್ಷನ್–4 ಅಡಿಯಲ್ಲಿ 579 ಪ್ರಕರಣಗಳು ದಾಖಲಿಸಿ ರೂ.48610 ದಂಡ ವಿಧಿಸಲಾಗಿದೆ ಹಾಗೂ ಮತ್ತು ಸೆಕ್ಷನ್ 6 (ಎ) ಅಡಿಯಲ್ಲಿ 54 ಪ್ರಕರಣಗಳು ದಾಖಲಿಸಿ ರೂ.9700 ದಂಡ ವಿಧಿಸಲಾಗಿದೆ ಮತ್ತು ಸೆಕ್ಷನ್ 6(ಬಿ) ಅಡಿಯಲ್ಲಿ 101 ಪ್ರಕರಣಗಳು ದಾಖಲಿಸಿ ರೂ.19500 ದಂಡ ವಿಧಿಸಲಾಗಿದೆ ಒಟ್ಟು 734 ಪ್ರಕರಣಗಳು ದಾಖಲಿಸಿ ರೂ.77810 ದಂಡ ವಿಧಿಸಲಾಗಿದೆ. ತಂಬಾಕು ಮುಕ್ತ ಯುವ ಅಭಿಯಾನ 3.0 ಅಡಿಯಲ್ಲಿ ಕೈಗೊಂಡ ಕಾರ್ಯ ಚಟುವಟಿಕೆ ಕುರಿತು ಮಾಹಿತಿ ನೀಡಿದರು.

ಈ ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಜಿಲ್ಲಾ ಜಾರಿ ಅಧಿಕಾರಿಗಳು, ಶಿಕ್ಷಣ ಇಲಾಖೆ, ಅಬಕಾರಿ ಇಲಾಖೆ ಸೇರಿದಂತೆ ಇತರೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಬೆಟ್ಟಿಂಗ್ ದಂಧೆಯ ಭಸ್ಮಾಸುರರಿಗೆ ಬಿಸಿ ಮುಟ್ಟಿಸಿ!

## ಸಾಮಾಜಿಕ ಕಳಕಳಿಯ ಲೇಖನ

■ ಉದಯರಶ್ಮಿ ದಿನಪತ್ರಿಕೆ

ಕ್ರೀಡೆ ಎನ್ನುವುದು ಶಿಸ್ತು, ಸಂಯಮ ಮತ್ತು ಸೌಹಾರ್ದತೆಯ ಸಂಕೇತ. ಆದರೆ ಇಂದು ಅದೇ ಕ್ರೀಡೆಯನ್ನು ಬಂಡವಾಳ ಮಾಡಿಕೊಂಡಿರುವ ಬೆಟ್ಟಿಂಗ್ ದಂಧೆಕೋರರು ಯುವಜನತೆಯ ಬದುಕನ್ನು ಜೂಜಿನ ಅಡ್ಡೆಯನ್ನಾಗಿ ಮಾಡುತ್ತಿದ್ದಾರೆ. ಅಲ್ಪಾವಧಿಯಲ್ಲಿ ಕೋಟ್ಯಧಿಪತಿಗಳಾಗುವ ಆಮಿಷವೊಡ್ಡಿ, ಮಧ್ಯಮ ವರ್ಗದ ಕುಟುಂಬಗಳ ನೆಮ್ಮದಿಯನ್ನು ಈ ಬೆಟ್ಟಿಂಗ್ ಮಾಫಿಯಾ ನುಂಗಿ ಹಾಕುತ್ತಿದೆ. ಈಗ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆಯ ಭವಿಷ್ಯ ಅಂಧಕಾರಕ್ಕೆ ದೂಡಲ್ಪಡುವುದರಲ್ಲಿ ಸಂದೇಹವಿಲ್ಲ.

ಬೆಂಗಳೂರು ಪೊಲೀಸರಿಗೆ ನಮ್ಮದೊಂದು ಆಗ್ರಹ

ಇತ್ತೀಚೆಗೆ ನಡೆದ ಆರ್‌ಸಿಬಿ (RCB) ಪಂದ್ಯಗಳ ವೇಳೆ ಬೆಂಗಳೂರು ಪೊಲೀಸ್ ಇಲಾಖೆ ವಹಿಸಿದ ಕಟ್ಟುನಿಟ್ಟಿನ ಕ್ರಮ ಮತ್ತು ಶಿಸ್ತು ನಿಜಕ್ಕೂ ಮಾದರಿ. ಲಕ್ಷಾಂತರ ಅಭಿಮಾನಿಗಳ ಸಾಗರವಿದ್ದರೂ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಾವಲು ಕಾಯ್ದ ಪೊಲೀಸರ ಕಾರ್ಯವೈಖರಿಗೆ ನಮ್ಮದೊಂದು ಬಿಗ್ ಸೆಲ್ಯೂಟ್. ಆದರೆ, ಮೈದಾನದ ಹೊರಗಿನ ಶಿಸ್ತಿನಷ್ಟೇ ಮುಖ್ಯವಾದುದು ಆನ್‌ಲೈನ್‌ನಲ್ಲಿ ಹಗಲು–ರಾತ್ರಿ ನಡೆಯುತ್ತಿರುವ ಬೆಟ್ಟಿಂಗ್ ದಂಧೆಯನ್ನು ಬುಡಸಮೇತ ಕಿತ್ತೊಗೆಯುವುದು. ಬೆಟ್ಟಿಂಗ್ ದಂಧೆಯ ಮಾಸ್ಟರ್‌ಮೈಂಡ್‌ಗಳ ಮೇಲೆ ಇಲಾಖೆ ಈಗ 'ಸರ್ಜಿಕಲ್ ಸ್ಟ್ರೈಕ್' ನಡೆಸಬೇಕಿದೆ. ಕೇವಲ ಏಜೆಂಟ್‌ಗಳನ್ನು ಹಿಡಿಯುವುದಲ್ಲ, ಈ ದಂಧೆಯ ಆರ್ಥಿಕ ಮೂಲಗಳನ್ನೇ ಧ್ವಂಸಗೊಳಿಸುವ ಅನಿವಾರ್ಯತೆ ಇದೆ.

**ಸೆಲೆಬ್ರಿಟಿಗಳೇ ಮತ್ತು ರೀಲ್ಸ್ ಸ್ಟಾರ್‌ಗಳೇ ಎಚ್ಚರ.. ಇದು ಬದುಕಿನ ಆಟ ;**

ಇಂದು ಹಣದ ಹಪಹಪಿಗೆ ಬಿದ್ದಿರುವ ಕೆಲವು ಸೆಲೆಬ್ರಿಟಿಗಳು ಮತ್ತು ರೀಲ್ಸ್ ಸ್ಟಾರ್‌ಗಳು ಬೆಟ್ಟಿಂಗ್ ಆ್ಯಪ್‌ಗಳನ್ನು ಬಹಿರಂಗವಾಗಿ ಪ್ರಮೋಟ್ ಮಾಡುತ್ತಿದ್ದಾರೆ. ನಿಮ್ಮನ್ನು ಫಾಲೋ ಮಾಡುವ ಲಕ್ಷಾಂತರ ಯುವಕರು ನಿಮ್ಮ ಮಾತನ್ನು ನಂಬಿ ಈ ಜೂಜಿನ ಬಲೆಗೆ ಬೀಳುತ್ತಿದ್ದಾರೆ.



"ಹಣಕ್ಕಾಗಿ ಯುವಜನತೆಯ ಭವಿಷ್ಯವನ್ನು ಅಡವಿಡುವುದು ದೇಶದ್ರೋಹಕ್ಕೆ ಸಮಾನ. ಇಂತಹ ಬೆಟ್ಟಿಂಗ್ ಪ್ರಮೋಷನ್ ಮಾಡುವವರ ಮೇಲೆ ಯಾವುದೇ ಮುಲಾಜಿಲ್ಲದೆ 'ಲೀಗಲ್ ಆಕ್ಷನ್' ತಗೋಬೇಕು. ಅವರ ವಿರುದ್ಧ ಈಖಖ ದಾಖಲಿಸಿ, ಜೈಲಿಗೆ ಕಳುಹಿಸುವ ಮೂಲಕ ಸಮಾಜಕ್ಕೆ ಗಟ್ಟಿಯಾದ ಸಂದೇಶ ರವಾನಿಸಬೇಕು."



**ಥಲಕ್ಕೆ ಮತ್ತೊಂದು ಹೆಸರು ವಿರಾಟ್ ಕೊಹ್ಲಿ**

ನೈಜ ಕ್ರೀಡಾ ಸ್ಫೂರ್ತಿಗೆ ವಿರಾಟ್ ಕೊಹ್ಲಿಗಿಂತ ದೊಡ್ಡ ಉದಾಹರಣೆ ಬೇಕಿಲ್ಲ. ತಾವೊಬ್ಬ 'ಚೇಸ್ ಕಿಂಗ್' ಎಂದು ಪದೇ ಪದೇ ಸಾಬೀತುಪಡಿಸಿದ ಕೊಹ್ಲಿಯವರ ಶಿಸ್ತು, ಪರಿಶ್ರಮ ಮತ್ತು ಗೆಲ್ಲುವ ಹಠ ನಮ್ಮ ಯುವಕರಿಗೆ ಮಾದರಿಯಾಗಬೇಕು. ಶಾರ್ಟ್‌ಕಟ್‌ನಲ್ಲಿ ಹಣ ಮಾಡುವ ಜೂಜಾಟದ ಬದಲು, ಕೊಹ್ಲಿಯವರಂತೆ ಕಠಿಣ ಪರಿಶ್ರಮದಿಂದ ಜೀವನವನ್ನು ಕಟ್ಟಿಕೊಳ್ಳುವತ್ತ ಯುವಪೀಳಿಗೆ ಗಮನಹರಿಸಬೇಕು.

**ಪೊಲೀಸ್ ಇಲಾಖೆಗೆ ಕಳಕಳಿಯ ವಿನಂತಿ**

ಆರಂಭದಲ್ಲೇ ಕಿತ್ತೊಗೆಯಿರಿ: ಬೆಟ್ಟಿಂಗ್ ಹಾವಳಿ ಚಿಗುರುವ ಮೊದಲೇ ಅದನ್ನು ಮಟ್ಟಹಾಕುವ ಕಟ್ಟುನಿಟ್ಟಿನ ಕಾರ್ಯಾಚರಣೆ ತೀವ್ರಗೊಳಿಸಿ.

ತಾಂತ್ರಿಕ ನಿಗಾ: ಸೈಬರ್ ಕ್ರೈಮ್ ವಿಭಾಗವು ಬೆಟ್ಟಿಂಗ್ ಲಿಂಕ್‌ಗಳು ಮತ್ತು ಆ್ಯಪ್‌ಗಳ ಮೇಲೆ ಹದ್ದಿನ ಕಣ್ಣಿಡಬೇಕು.

ಸಾರ್ವಜನಿಕ ಜಾಗೃತಿ: 'ಬೆಟ್ಟಿಂಗ್ ಮುಕ್ತ ಸಮಾಜ'ಕ್ಕಾಗಿ ದೊಡ್ಡ ಮಟ್ಟದ ಅಭಿಯಾನ ಹಮ್ಮಿಕೊಳ್ಳಬೇಕು.

**ಬೆಟ್ಟಿಂಗ್ ಎಂಬುದೊಂದು ವಿಷದ ಸುಳಿ**

ಬೆಟ್ಟಿಂಗ್ ಎಂಬುದು ಒಂದು ವಿಷದ ಸುಳಿ. ಅದರಲ್ಲಿ ಒಮ್ಮೆ ಸಿಲುಕಿದರೆ ಹೊರಬರುವುದು ಅಸಾಧ್ಯ. ಪೊಲೀಸ್ ಇಲಾಖೆಯ ಖಡಕ್ ಕ್ರಮ ಮತ್ತು ಸಾರ್ವಜನಿಕರ ಸಂಘಟಿತ ಹೋರಾಟದಿಂದ ಮಾತ್ರ ಈ ದಂಧೆಯನ್ನು ಮಟ್ಟಹಾಕಲು ಸಾಧ್ಯ. ಬೆಟ್ಟಿಂಗ್ ದಂಧೆಕೋರರೇ ಎಚ್ಚರ, ನಿಮ್ಮ ಅಕ್ರಮ ವ್ಯವಹಾರಗಳಿಗೆ ಕಾಲ ಹತ್ತಿರ ಬಂದಿದೆ!

ತಯುವಜನತೆ ದೇಶದ ಆಸ್ತಿ ಎಂದು ಹೇಳುತ್ತೇವೆ. ಆದರೆ, ಅದೇ ಯುವಕರು ಇಂದು ಬೆಟ್ಟಿಂಗ್ ಆ್ಯಪ್‌ಗಳ ದುಬಾರಿ ಜಾಹೀರಾತುಗಳಿಗೆ ಮರುಳಾಗಿ, ಸುಲಭವಾಗಿ ಹಣ ಗಳಿಸುವ ಭ್ರಮೆಯಲ್ಲಿ ಸಿಲುಕಿದ್ದಾರೆ. ಇದು ಒಂದು ವ್ಯಸನವಾಗಿ ಬದಲಾಗಿ, ಅವರು ತಮ್ಮ ಓದು, ವೃತ್ತಿ ಮತ್ತು ಕುಟುಂಬದಿಂದ ದೂರವಾಗುತ್ತಿದ್ದಾರೆ. ಬೆಟ್ಟಿಂಗ್‌ಗಾಗಿ ಹಣ ತರಲು ಕಳ್ಳತನ, ವಂಚನೆ ಮತ್ತು ಅಂತಿಮವಾಗಿ ಅಪರಾಧ ಲೋಕಕ್ಕೂ ಕಾಲಿಡುತ್ತಿರುವ ಯುವಕರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಪಾವಧಿಯಲ್ಲಿ ಕೋಟ್ಯಧಿಪತಿಯಾಗುವ ಹಗಲುಗನಸು ಕಂಡು, ಸಾಲದ ಸುಳಿಗೆ ಸಿಲುಕಿ, ಅಂತಿಮವಾಗಿ ಖಿನ್ನತೆ ಮತ್ತು ಆತ್ಮಹತ್ಯೆಯಂತಹ ದಾರಿ ಹಿಡಿಯುತ್ತಿರುವ ಯುವಕರ ಬದುಕು ನಿಜಕ್ಕೂ ಆತಂಕಕಾರಿಯಾಗಿದೆ. ಈ ಬೆಟ್ಟಿಂಗ್ ಮಾಫಿಯಾವನ್ನು ತಡೆಯಲು ಕೇವಲ ಪೊಲೀಸ್ ಇಲಾಖೆಯ ಕ್ರಮಗಳು ಸಾಕಾಗುವುದಿಲ್ಲ. ಇದು ಸಾಮಾಜಿಕ ಪಿಡುಗು, ಇದನ್ನು ನಾವೆಲ್ಲರೂ ಒಟ್ಟಾಗಿ ಎದುರಿಸಬೇಕು.

**ಸಂಸಾರ ನಡುರಸ್ತೆಗೆ: ಕಣ್ಣೀರಿನ ಕಥೆಗಳು**


ಬೆಟ್ಟಿಂಗ್‌ಗೆ ಬಿದ್ದವರು ಕೇವಲ ತಮ್ಮ ಹಣವನ್ನಷ್ಟೇ ಕಳೆದುಕೊಳ್ಳುವುದಿಲ್ಲ. ಅವರು ತಮ್ಮ ಆತ್ಮವಿಶ್ವಾಸ, ಘನತೆ ಮತ್ತು ನೆಮ್ಮದಿಯನ್ನೂ ಕಳೆದುಕೊಳ್ಳುತ್ತಾರೆ. ಎಷ್ಟೋ ಸಂಸಾರಗಳಲ್ಲಿ, ಗಂಡ ಬೆಟ್ಟಿಂಗ್ ಮಾಡಿ ಲಕ್ಷಾಂತರ ರೂಪಾಯಿ ಸಾಲದ ಸುಳಿಗೆ ಸಿಲುಕಿದಾಗ, ಹೆಂಡತಿ ಮತ್ತು ಮಕ್ಕಳು ತಲೆಮರೆಸಿಕೊಂಡು ಬದುಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಲ ಕೊಟ್ಟವರ ಕಿರುಕುಳ, ಸಮಾಜದ ನಿಂದನೆ ಮತ್ತು ಆರ್ಥಿಕ ಸಂಕಷ್ಟದಿಂದಾಗಿ ನೂರಾರು ಕುಟುಂಬಗಳು ಆತ್ಮಹತ್ಯೆಯಂತಹ ತೀವ್ರ ನಿರ್ಧಾರಗಳನ್ನು ಕೈಗೊಂಡ ಉದಾಹರಣೆಗಳು ನಮ್ಮ ಕಣ್ಣಮುಂದಿವೆ. ಒಂದು ಸುಂದರ ಸಂಸಾರ, ಕೇವಲ ಒಂದು 'ಕ್ಲಿಕ್' ಮತ್ತು ಒಂದು 'ಬೆಟ್ಟಿಂಗ್'ನಿಂದಾಗಿ ಕೆಲವೇ ದಿನಗಳಲ್ಲಿ ನಡುರಸ್ತೆಗೆ ಬರುತ್ತದೆ. ಇದು ಸಂಸಾರವನ್ನು ಅನಾಥವಾಗಿಸುವ ಕ್ರೂರ ಆಟ.




**ಬೆಟ್ಟಿಂಗ್ ಎಂಬುದು ಒಂದು ಕ್ಷಣಿಕ ಸುಖ**

ಬೆಟ್ಟಿಂಗ್ ಎಂಬುದು ಒಂದು ಕ್ಷಣಿಕ ಸುಖ, ಆದರೆ ಅದರ ಪರಿಣಾಮ ಇಡೀ ಜೀವನದ ದುಃಖ. ನಿಮ್ಮ ಬದುಕು ಮತ್ತು ಸಂಸಾರವನ್ನು ಜೂಜಾಟದಲ್ಲಿ ಕಳೆದುಕೊಳ್ಳಬೇಡಿ. ಕಷ್ಟಪಟ್ಟು ಸಾಧಿಸುವುದರಲ್ಲಿ ಇರುವ ಸುಖ ಜೂಜಾಟದಲ್ಲಿಲ್ಲ ಎಂಬುದನ್ನು ಯುವಪೀಳಿಗೆ ಅರಿಯಬೇಕಿದೆ. ಬೆಟ್ಟಿಂಗ್ ದಂಧೆಯ ವಿರುದ್ಧ ನಾವೆಲ್ಲರೂ ಒಟ್ಟಾಗಿ ನಿಲ್ಲೋಣ, ಸುಂದರ ಸಮಾಜವನ್ನು ನಿರ್ಮಿಸೋಣ.

ಲೇಖನ
■ ವಿಶ್ವಪ್ರಕಾಶ ಟಿ. ಮಲಗೊಂಡ
editortkm@gmail.com
- 6366520266
ಉಪ ಸಂಪಾದಕರು
ಅಪರಾಧಕ್ಕೆ ಸವಾಲು ದಿನಪತ್ರಿಕೆ



### ಹಣ ಪಡೆದು ವಿದ್ಯಾರ್ಥಿಗಳಿಗೆ ಇಷ್ಟವಾದ ಕೇಂದ್ರ । ಸಂಭಾಷಣೆ ಮತ್ತು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಆಡಿಯೋ ವೈರಲ್

# ಪರೀಕ್ಷಾ ಕೇಂದ್ರಗಳ ವ್ಯವಸ್ಥೆಗೆ ವಿದ್ಯಾರ್ಥಿಗಳಿಂದ ಹಣ ವಸೂಲಿ ಆರೋಪ!

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಬೇಕಾದ ಕೇಂದ್ರಗಳ ವ್ಯವಸ್ಥೆ ಮಾಡಿ ಕೊಡುವುದಾಗಿ ಸುಮಾರು 30ಕ್ಕೂ ಅಧಿಕ ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡಿ, ಅವರು ಕೇಳಿದ ಪರೀಕ್ಷಾ ಕೇಂದ್ರಕ್ಕೆ ಪರೀಕ್ಷಾ ದಾಖಲಾತಿ ನೀಡುವ ಭರವಸೆಯನ್ನು ಸಿಂದಗಿ ಸರಕಾರಿ ಆದರ್ಶ ಶಾಲೆಯ ಶಿಕ್ಷಕ ರಮೇಶ ಚಟ್ಟರಕಿ ನೀಡಿದ್ದರು ಎಂಬ ಸಂಭಾಷಣೆ ಮತ್ತು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು ಇದೀಗ ಬೆಳಕಿಗೆ ಬಂದಿದೆ. ಈ ಕುರಿತು ನಮ್ಮ ಮಾಧ್ಯಮ ಪ್ರತಿನಿಧಿಯೊಂದಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹಾಂತೇಶ ಯಡ್ರಾಮಿ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಈ ವಿಷಯದ ಕುರಿತು ವೈರಲ್ ಆಗಿದೆ. ಅದಕ್ಕೆ ಸಂಬಂಧಿಸಿದಂತೆ ಶಿಕ್ಷಕ ರಮೇಶ ಚಟ್ಟರಕಿ ಅವರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದೆ. ಮತ್ತು ಮೇಲಾಧಿಕಾರಿಗಳ ಆದೇಶದ ಮೇರೆಗೆ ಶಾಲೆಯ ಶಿಕ್ಷಕನ ಈ ಕಾರ್ಯಕ್ಕೆ ಏನು ಮಾಡಿದ್ದಾರೆ ಎಂದು ಮುಖ್ಯೋಪಾಧ್ಯಾಯರಿಗೂ ಒಂದು ನೋಟಿಸ್ ನೀಡಿ ಎಂದು ಹೇಳಿದ ಕಾರಣ ಅವರಿಗೊಂದು ಜಾರಿ ಮಾಡಿಲಾಗಿದೆ. ಮಕ್ಕಳ ಪಾಲಕರು ನನಗೆ ಕರೆ ಮಾಡಿ ಇದರಲ್ಲಿ ಮಕ್ಕಳದ್ದೇ ತಪ್ಪಿದೆ ಎಂದು ಮಕ್ಕಳೇ ಒಪ್ಪಿಕೊಳ್ಳುತ್ತಿದ್ದಾರೆ ಬನ್ನಿ ಎಂದು ಕರೆದರೂ ನಾನು ಹೋಗಿಲ್ಲ. ಅದಕ್ಕೆ ಸಂಬಂಧಿಸಿದಂತೆ ಶಿಕ್ಷಕ ರಮೇಶ ಚಟ್ಟರಕಿ ಲಿಖಿತವಾಗಿ ಕಾರಣ ನೀಡಬೇಕು ಎಂದು ತಿಳಸಿದ್ದೇನೆ. ಮಕ್ಕಳು ಯಾವ ಕೇಂದ್ರಕ್ಕೆ ದಾಖಲಾಗುತ್ತಾರೆ ಎಂಬುದು ಪರೀಕ್ಷಾ ಮಂಡಳಿಯ ಕಾರ್ಯ. ನಮಗೂ ಮತ್ತು ಡಿಡಿಪಿಐ ಅವರಿಗೂ ಮಾಹಿತಿ ಇರುವುದಿಲ್ಲ. ಆದರೆ ಪರೀಕ್ಷೆಗೆ ಮುಂಚೆ ಪ್ರವೇಶ ಪತ್ರಗಳು ಶಾಲೆಯ ಲಾಗಿನ್‌ಗೆ ಬರುತ್ತವೆ. ಬಹುಷಃ ಅದನ್ನು ಗಮನಿಸಿ ನಾನೇ ಮಾಡಿಸಿದ್ದೇನೆ ಎಂಬುದಾಗಿ ಹೇಳಿ ದುರುಪಯೋಗ ಪಡಿಸಿಕೊಂಡಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇದರ ಕುರಿತಾಗಿ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮಂಗಳವಾರ 3ಜನರ ತಂಡವೊಂದನ್ನು ರಚಿಸಿ ತನಿಖೆ ಮಾಡಿ ವಿವರವಾದ ವರದಿಯನ್ನು ನೀಡಲಾಗುವುದು ಎಂದರು.



# ಅಧ್ಯಕ್ಷರಾಗಿ ಮನಿಯಾರ ಅವಿರೋಧವಾಗಿ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಸರಕಾರಿ ಉರ್ದು ಪ್ರಾಥಮಿಕ ಶಾಲಾ ಶಿಕ್ಷಕರ ಪತ್ತಿನ ಸಹಕಾರಿ ಸಂಘ ನಿ. 2026–2031ನೆಯ ಸಾಲಿನ ಅವಧಿಗೆ ಅಧ್ಯಕ್ಷರಾಗಿ ಝಡ್.ಎಸ್.ಮುನಿಯಾರ, ಉಪಾಧ್ಯಕ್ಷರಾಗಿ ಎ.ಡಿ.ಭೂಸನೂರ. ನಿರ್ದೇಶಕರಾಗಿ ಅಲ್ತಾಫ್ ಸಾಲೋಟಗಿ. ಡಿ.ಎಲ್.ಮರ್ತೂರ. ಝಡ್. ಎಸ್. ಬಗಲಿ. ಎಂ.ಎ.ನಾಯ್ಕೋಡಿ. ಎಂ. ಎಚ್.ಮರ್ತೂರ. ಆರ್.ಎಂ.ಹಳ್ಳಿ ಮಹಿಳಾ ನಿರ್ದೇಶಕರಾಗಿ ಎನ್.ಆರ್.ಮಕಾನದಾರ. ಆರ್.ಜಿ.ತಾಂಬೋಳಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುಣಾವಣಾಧಿಕಾರಿ ವಿ.ಆರ್.ಜತ್ತಿ ತಿಳಸಿದ್ದಾರೆ.



# ಕೋರವಾರ ಕೋರವಾರೇಶನ ಅದ್ದೂರಿ ರಥೋತ್ಸವ ಸಂಪನ್ನ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕೋರವಾರ ಗ್ರಾಮದ ಕೋರವಾರೇಶನ ರಥೋತ್ಸವ ಹಾಗೂ ಪಲ್ಲಕ್ಕಿ ಮಹೋತ್ಸವ ಸಾವಿರಾರು ಭಕ್ತವೃಂದದೊಂದಿಗೆ ವಿಜೃಂಭಣೆಯಿಂದ ಜರುಗಿತು. ಗ್ರಾಮದ ಆರಾಧ್ಯದೈವವಾದ ಕೋರವಾರೇಶನ ರಥೋತ್ಸವದ ಅಂಗವಾಗಿ ಶನಿವಾರ ಸಾಂಪ್ರದಾಯಿಕವಾಗಿ ನಡೆದು ಬಂದ ಪೂಜಾ ವಿಧಿವಿಧಾನಗಳು ಬೆಳಿಗ್ಗೆ ಹೋಮ ಹವನದೊಂದಿಗೆ ಆರಂಭಗೊಂಡವು. ನಂತರ ಕೋರವಾರೇಶನ ಮೂರ್ತಿ ಹೊತ್ತ ಪಲ್ಲಕ್ಕಿ ಮೂಲಸ್ಥಳ ದೇವಸ್ಥಾನದಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ದೇವಸ್ಥಾನ ತಲುಪಿತು. ನಂತರ ಮೆರವಣಿಗೆ ಮೂಲಕ ತಂದ ಕಳಶವನ್ನು ರಥದ ಮೇಲೆ ಪ್ರತಿಷ್ಠಾಪಿಸಲಾಯಿತು.

ಸಾಯಂಕಾಲ ಹೂವಿನಹಾರ ಹಾಗೂ ತಳಿರು ತೋರಣಗಳಿಂದ ಶೃಂಗಾರಗೊಂಡ ರಥ(ತೇರ)ಕ್ಕೆ ನೆರೆದ ಸಾವಿರಾರು ಜನ ಭಕ್ತರು ಜಯಕಾರ ಉದ್ಘೋಶಗಳಿಂದ ಚಾಲನೆ ನೀಡಿದರು. ರಥೋತ್ಸವಕ್ಕೆ ಮಹಾರಾಷ್ಟ್ರ, ಆಂಧ್ರ ಸೇರಿದಂತೆ ವಿವಿಧ ಪ್ರದೇಶಗಳಿಂದ ಬಂದ ಅಸಂಖ್ಯಾತ ಭಕ್ತಸಮೂಹ ಯಾವುದೇ ಅಡ್ಡಿ ಆತಂಕಗಳಿಲ್ಲದ ಉತ್ಸಾಹದಿಂದ ರಥವನ್ನು ಸರಾಗವಾಗಿ ಎಳೆದು ತಮ್ಮ ಭಕ್ತಿ, ಭಾವ ತೋರಿದರು. ಈ ಸಮಯದಲ್ಲಿ ಮಹಿಳೆಯರು, ಮಕ್ಕಳು, ಯುವಕರು ತಾವು ತಂದ ಉತ್ತತ್ತಿ, ಬಾಳೆಹಣ್ಣುಗಳನ್ನು ರಥೋತ್ಸವ ಸಾಗುವಾಗ ಅದರ ಮೇಲೆ ಎರೆಚಿ ಸಂತಸಪಟ್ಟರು. ರಥೋತ್ಸವದ ನಂತರ ಭಕ್ತರು ಕೋರವಾರೇಶ ದ್ವಾರಬಾಗಿಲಿನ ಹೊಸ್ತಿಲಿಗೆ ನೂರಾರು ಟೆಂಗುಗಳನ್ನು ಸಿಡಿಗಾಯಿ ಒಡೆದು ತಮ್ಮ ಹರಿಕೆ ತೀರಿಸಿದರು.

ಜಾತ್ರೆಯ ಅಂಗವಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

### ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷ ಸಿಂದಗಿ ಸಾರಂಗಮಠದ ಡಾ.ಪ್ರಭುಸಾರಂಗದೇವ ಶ್ರೀಗಳು ಕರೆ

# ಸ್ವಾರ್ಥವನ್ನು ತೆಗೆದುಹಾಕಿ ಸಾರ್ಥಕವಾದ ಜೀವನವನ್ನು ನಡೆಸಿ

■ ಉದಯರಶ್ಮಿ ದಿನಪತ್ರಿಕೆ



ಪಡಗಾನೂರ(ದೇವರಹಿಪ್ಪರಗಿ): ನಿಸ್ವಾರ್ಥವೆಂಬುದು ಧರ್ಮವಾಗಿದ್ದು, ಸ್ವಾರ್ಥವೆಂಬುದು ಅಧರ್ಮವಾಗಿದೆ. ಸ್ವಾರ್ಥವನ್ನು ತೆಗೆದುಹಾಕಿ ಎಲ್ಲರೂ ಸಾರ್ಥಕವಾದ ಜೀವನವನ್ನು ನಡೆಸಬೇಕು ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾದ ಸಿಂದಗಿ ಸಾರಂಗಮಠದ ಡಾ.ಪ್ರಭುಸಾರಂಗದೇವ ಶ್ರೀಗಳು ಹೇಳಿದರು.

ತಾಲ್ಲೂಕಿನ ಪಡಗಾನೂರ ಗ್ರಾಮದ ಸೋಮೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಜರುಗಿದ ಧರ್ಮಸಭೆ ಹಾಗೂ ಸಾಮೂಹಿಕ ವಿವಾಹದ ಸಾನಿಧ್ಯ ವಹಿಸಿ, ಗ್ರಾಮಸ್ಥರಿಂದ ಗುರುವಂದನ ಸ್ವೀಕರಿಸಿ ಮಾತನಾಡಿದರು. ನಿಸ್ವಾರ್ಥ ಕಾಯಕ ನಮ್ಮನ್ನು ನಾಯಕರನ್ನಾಗಿಸುತ್ತದೆ ಎಂದರು.

ಶಾಸಕ ರಾಜುಗೌಡ ಪಾಟೀಲ(ಕುದರಿಸಾಲವಾಡಗಿ), ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ. ಪ್ರಭುಗೌಡ ಲಿಂಗದಳ್ಳಿ(ಚಬನೂರ), ಮಾಜಿಶಾಸಕ ಶರಣಪ್ಪ ಸುಣಗಾರ ಮಾತನಾಡಿದರು.

ಕಡಗಂಚಿಯ ಸಾವಿರದೇವರ ಸಂಸ್ಥಾನ ಮಠದ ವೀರಭದ್ರ ಸ್ವಾಮೀಜಿ ನೇತೃತ್ವದಲ್ಲಿ ಹಾಗೂ ಸೋಮೇಶ್ವರ ದೇವಸ್ಥಾನ ಕಮೀಟಿಯ ಅಧ್ಯಕ್ಷ ಅಯ್ಯಪ್ಪಯ್ಯ ಹಿರೇಮಠ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮದ ಸುಮಂಗಲೆಯರಿಂದ ಕುಂಭ ಕಳಶ,ಪಲ್ಲಕ್ಕಿಗಳ ಮೆರವಣಿಗೆ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು.

ಇಂಗಳೇಶ್ವರ ಭೃಂಗೇಶ್ವರ ಶ್ರೀ, ಬಸವನಬಾಗೇವಾಡಿ ಶಿವಪ್ರಕಾಶಶ್ರೀ, ಯಂಕಂಚಿಯ ಅಭಿನವ ರುದ್ರಮುನಿಶ್ರೀ, ದೇವರಹಿಪ್ಪರಗಿಯ ವೀರಗಂಗಾಧರಶ್ರೀ , ಸಿಂದಗಿಯ ವಿಶ್ವಪ್ರಭುಶ್ರೀ, ಮುಳಸಾವಳಗಿಯ ದಯಾನಂದ ಸ್ವಾಮೀಜಿ, ಕರಭಂಟನಾಳದ ಶಿವಕುಮಾರ ಸ್ವಾಮೀಜಿ, ಡಿಸಿಸಿ ಬ್ಯಾಂಕ ನಿರ್ದೇಶಕ ಹಣಮಂತ್ರಾಯಗೌಡ ಪಾಟೀಲ, ಸೋಮೇಶ್ವರ ದೇವಸ್ಥಾನ ಕಮೀಟಿ ಉಪಾಧ್ಯಕ್ಷ ಬಸನಗೌಡ ಪಾಟೀಲ, ಡಾ.ಮಹಾಂತೇಶ ಹಿರೇಮಠ, ಶ್ರೀಶೈಲ ಕಬ್ಬಿನ, ಗುರುರಾಜ ಆಕಳವಾಡಿ ಸೇರಿದಂತೆ ಪಡಗಾನೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಇದ್ದರು.

### ಸ್ವಾತಂತ್ರ್ಯ ಸೇನಾನಿ ಪದ್ಮಾವತಿ ವಾಮನರಾವ್ ದೇಸಾಯಿ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿದ ವಿಶ್ರಾಂತ ಸಂಪಾದಕ ಮನೋಜ ಪಾಟೀಲ ಅಭಿಮತ

# ದೇಶದ ಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಪದ್ಮಾವತಿ

■ ಉದಯರಶ್ಮಿ ದಿನಪತ್ರಿಕೆ



ಜಮಖಂಡಿ: ದೇಶದ ಸ್ವತಂತ್ರ್ಯಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಪದ್ಮಾವತಿ ಬಾಯಿ ಅತ್ಯಂತ ಕಷ್ಟದ ಜೀವನ ನಡೆಸಿದರು. ಗಂಡನ ಮನೆಯ ನೂರಾರು ಎಕರೆ ಭೂಮಿ ಕಳೆದುಕೊಂಡು, ವಿದ್ಯುತ್, ನೀರು, ಶೌಚಾಲಯವಿಲ್ಲದ ಅತ್ಯಂತ ಕಿರಿದಾದ ಕೋಣೆಯಲ್ಲಿ ವಾಸವಿದ್ದು, ತಮ್ಮ ಕೊನೆಯ ಜೀವನ ಕಳೆದರು ಎಂದು ಸ್ವಾತಂತ್ರ್ಯ ಸೇನಾನಿ ಪದ್ಮಾವತಿ ಬಾಯಿ ಅವರ ಮೊಮ್ಮಗ, ವಿಶ್ರಾಂತ ಸಂಪಾದಕ, ಮನೋಜ ಪಾಟೀಲ ಹೇಳಿದರು.

ನಗರದ ಬಸವ ಭವನದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯ ಸೇನಾನಿ ಪದ್ಮಾವತಿ ವಾಮನರಾವ್ ದೇಸಾಯಿ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಜಮಖಂಡಿಯಲ್ಲಿ ಪೇಶ್ವೆಗಳ ಸಂಸ್ಥಾನ ಇದ್ದುದರಿಂದ ಎಲ್ಲ ಕಾಗದ ಪತ್ರಗಳು, ದಾಖಲೆಗಳು ಮಹಾರಾಷ್ಟ್ರದ ಪುಣೆಯಲ್ಲಿವೆ. ಕರ್ನಾಟಕದಲ್ಲಿ ಪೇಶ್ವೆಗಳ ಆಡಳಿತದ ಯಾವ ದಾಖಲೆಗಳು ಸಿಗುತ್ತಿಲ್ಲ. ಮೊದಲು ಕನ್ನಡಕ್ಕೆ ಪ್ರಾಶಸ್ತ್ಯವಿರಲಿಲ್ಲ, ಮರಾಠಿ ಪ್ರಭಾವವಿತ್ತು. ಈಗಲೂ ಪೇಶ್ವಾಯಿ ಸಂಸ್ಥಾನಗಳ ದಾಖಲೆಗಳು ಬೇಕಾದಲ್ಲಿ ಪುಣೆಗೆ ಹೋಗಬೇಕಾದ ಅನಿವಾರ್ಯತೆಯಿದೆ. ದಾಖಲೆಗಳಿಲ್ಲದ ಕಾರಣ ಅನಂತರಾವ ಸಾಬಡೆ, ಮರಣ ಸೇರಿದಂತೆ ಹಲವು ಘಟನೆಗಳು ಇಂದಿಗೂ ನಿಗೂಢವಾಗಿದೆ ಅವುಗಳನ್ನು ಬೆಳಕಿಗೆ ತರಬೇಕಿದೆ ಎಂದು ಹೇಳಿದರು.

ಗ್ರಂಥ ಲೇಖಕ ಡಾ.ತಾತಾಸಾಹೇಬ್ ಬಾಂಗಿ ಮಾತನಾಡಿ, ಪದ್ಮಾವತಿ ಬಾಯಿ ಅವರ ಚರಿತ್ರೆ ಎಲ್ಲ ಭಾಷೆಗಳಿಗೆ ತರ್ಜುಮೆ ಆಗಬೇಕು, ಅವರ ಗೌರವಾರ್ಥ ಪೋಸ್ಟ್ ಸ್ಟಾಂಪ್ ಬಿಡುಗಡೆಗೊಳಿಸಬೇಕು ಹಾಗೂ ಪಠ್ಯದಲ್ಲಿ ಅವರ ಚರಿತ್ರೆ ಸೇರಬೇಕು, ಜಮಖಂಡಿಯ ವಿವಿಯಲ್ಲಿ ಅವರ ಹೆಸರಿನ ಪೀಠ ಸ್ಥಾಪನೆ ಮಾಡುವ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಸಂಶೋಧನೆ ಆಗಬೇಕೆಂಬ ಆಸೆ ಇದೆ ಎಂದು ತಿಳಿಸಿದರು.

ಮಹಿಳಾ ವಿವಿಯ ವಿಶ್ರಾಂತ ಕುಲಪತಿ ಮೀನಾ ಚಂದಾವರಕರ ಗ್ರಂಥ ಬಿಡುಗಡೆ ಮಾಡಿ ಮಾತನಾಡಿದರು. ಬಾಗಲಕೋಟೆಯ ಹಿಂದುಸ್ಥಾನ ಸೇವಾದಳ ಟ್ರಸ್ಟ್‌ನ ವ್ಯವಸ್ಥಾಪಕ ಶ್ರೀನಿವಾಸ ಛಬ್ಬಿ ಮಾತನಾಡಿದರು.

ವಿಮರ್ಶಕ ವೈ.ಎಂ. ಯಾಕೊಳ್ಳಿ ಕೃತಿ ಪರಿಚಯ ಮಾಡಿಕೊಟ್ಟರು.

ಪದ್ಮಾವತಿ ಬಾಯಿ ಅವರ ಕೊನೆಯ ದಿನಗಳಲ್ಲಿ ಅವರಿಗೆ ಸಹಕಾರ ಮಾಡಿದ ಡಾ.ಪ್ರಲ್ಹಾದ ಹುಲ್ಯಾಳಕರ, ಡಾ, ಪ್ರಕಾಶ ಹೊನವಾಡ ಅವರನ್ನು ಸನ್ಮಾನಿಸಲಾಯಿತು. ಸಿದ್ಧಮುತ್ಯಾ ಸಾನ್ನಿಧ್ಯ ವಹಿಸಿದ್ದರು. ಸಾಹಿತಿ ಮಹದೇವ ಬಸರಕೊಡ, ಜಿಲ್ಲಾ ನೋಂದಣಾಧಿಕಾರಿ ಸವಿತಾ ಲಕ್ಷ್ಮೀ, ಸಾಹಿತಿ ಕೆ..ಚನ್ನಪ್ಪ, ವಿಶ್ರಾಂತ ಸುಬೇದಾರ ರಾಮು, ಗೃಹರಕ್ಷಕ ದಳದ ಡಾ.ಎಚ್. ಬಿ. ಚೌಧರಿ, ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ, ಬಸವ ಸಮಿತಿ ಅಧ್ಯಕ್ಷ ಕಾಡುಮಾಳಿ ಇತರರು ಇದ್ದರು. ತಾಲೂಕು ಕಸಾಪ ಅಧ್ಯಕ್ಷ ಸಂತೋಷ ತಳಕೇರಿ ಸ್ವಾಗತಿಸಿದರು. ಪ್ರೊ.ವಿನಾಯಕ ಕುಲಕರ್ಣಿ, ಸರಿತಾ ಶಿರಗುಪ್ಪಿ ನಿರೂಪಿಸಿದರು.

# ಗೋಲಗೇರಿ ನೀರಿನ ಸಮಸ್ಯೆ ನೀಗಿಸಲು ಕೋರವಾರ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ತಾಲೂಕಿನ ಗೋಲಗೇರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಮಾಜಿ ಗ್ರಾಮ ಪಂಚಾಯತ್ ಸದಸ್ಯ ಎ.ಡಿ.ಕೋರವಾರ ಆಗ್ರಹಿಸಿದ್ದಾರೆ.

ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಮದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಗೋಲಗೇರಿ ಗ್ರಾಮವು ಸುಮಾರು 8ಸಾವಿರ ಜನರನ್ನು ಹೊಂದಿರುವ ಗ್ರಾಮವಾಗಿದೆ. ಎರಡನೇ ಶ್ರೀಶೈಲ ಎಂದೇ ಖ್ಯಾತಿಯಾಗಿರುವ ಶ್ರೀ ಗೊಲ್ಲಾಳೇಶ್ವರ ದೇವಸ್ಥಾನವು ಗೋಲಗೇರಿಯಲ್ಲಿದೆ. ಲಕ್ಷಾಂತರ ಭಕ್ತರು ದೇವಸ್ಥಾನಕ್ಕೆ ದರ್ಶನ ಪಡೆಯಲು ಬರುತ್ತಾರೆ. ಈ ಗ್ರಾಮಕ್ಕೆ ಸರ್ಕಾರದ ಯೋಜನೆಯಲ್ಲಿ ಸಾಕಷ್ಟು ಅನುದಾನ ಬಂದರೂ ಸಹ ಈ ಗ್ರಾಮದಲ್ಲಿ ಮಾತ್ರ ಕುಡಿಯುವ ನೀರು ಮಾತ್ರ ಪೂರೈಕೆಯಾಗುತ್ತಿಲ್ಲ. ಜಲಜೀವನ ಮಿಷನ್ ಅಡಿಯಲ್ಲಿ ಸುಮಾರು ರೂ.3ಕೋಟಿ ವೆಚ್ಚದ ಕಾಮಗಾರಿಯಾಗಿದೆ. ಆದರೆ ಆ ಕಾಮಗಾರಿಯು ಅರ್ಧಪೂರ್ಣವಾಗಿಲ್ಲ ಮತ್ತು ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ.

ಇದರ ಕುರಿತಾಗಿ ಸ್ಥಳೀಯ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಗಮನಕ್ಕೂ ತಂದಿದ್ದೇವೆ. ಜಿಲ್ಲಾ ಪಂಚಾಯಿತ್ ಅನುದಾನದಲ್ಲಿ ಸುಮಾರು 4ತೆರೆದ ಬಾವಿಗಳು ಇದಾವೆ. ಆದರೆ ಅದು ನೀರನ್ನು ರಾಜಕಾರಣಿಗಳ ಪಾಲಾಗಿದ್ದು, ಸಾರ್ವಜನಿಕರಿಗೆ ಉಪಯೋಗ ಇಲ್ಲದಂತಾಗಿದೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಕ್ಕೆ ಭೇಟಿ ನೀಡಿ ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದ್ದಾರೆ.

ಇದೇ ಸಂದರ್ಭದಲ್ಲಿ ಬಸನಗೌಡ ಮೇಲಿನಮನಿ, ವಾಸುದೇವ ಪತ್ತಾರ, ಶಾಂತಗೌಡ ಪಾಟೀಲ ಇದ್ದರು.

# ಚಹಾದೊಂದಿಗೆ ಕಲಾವಿದರು–ಸಾಂಸ್ಕೃತಿಕ ಚಿಂತಕರ ಚರ್ಚಾಕೂಟ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸಹಯೋಗದೊಂದಿಗೆ ಕಲಾವಿದರು ಮತ್ತು ಸಾಹಿತಿಗಳು, ಸಂಗೀತಗಾರರು, ಶಿಕ್ಷಕರು ಹಾಗೂ ಸಾಂಸ್ಕೃತಿಕ ಚಿಂತಕರೊಂದಿಗೆ ಚರ್ಚೆ ಮತ್ತು ಚಹಾಕೂಟದ ಕಾರ್ಯಕ್ರಮವನ್ನು ಜ್ಞಾನಯೋಗಾಶ್ರಮ ಹತ್ತಿರವಿರುವ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರ ಉದ್ಯಾನವನದಲ್ಲಿ ರವಿವಾರ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಡಾ. ಎಂ.ಎಸ್ ಮದಬಾವಿ, ಮಾತನಾಡುತ್ತಾ ಕಲೆ ಸಾಹಿತ್ಯ ಸಂಸ್ಕೃತಿ ಸಮಾಜದ ಅವಿಭಾಜ್ಯ ಅಂಗ ಈ ಕ್ಷೇತ್ರದ ಎಲ್ಲರೂ ಒಟ್ಟಾಗಿ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು, ಸಂಘಟನೆ ಮಾಡುವುದು ಅತ್ಯವಶ್ಯಕ ಎಲ್ಲರೂ ಸೇರಿ ಚಿಂತನ ಮಂಥನ ಮಾಡುವುದು ಈಗಿನ ದಿನಮಾನಗಳಲ್ಲಿ ಅವಶ್ಯಕವಾಗಿದೆ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ಮುಂದುವರೆಯಲಿ ಸರ್ಕಾರ ಮತ್ತು ವಿವಿಧ ಅಕಾಡೆಮಿಗಳ, ಪ್ರಾಧಿಕಾರಗಳ ಸಹಯೋಗದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಬಹುದು ಎಂದು ಸಲಹೆ ನೀಡಿದರು. ಕಲಾಪೋಷಕರು ಹಾಗೂ ವೈದ್ಯರಾದ ಡಾ. ಸತೀಶ್ ಜಿಗಜಿನ್ನಿ ಮಾತನಾಡುತ್ತಾ, ಈಗಿನ ಯುವಕರು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಖ್ಯಾತರಾಗಲು ಹಲವಾರು ಯೋಜನೆಗಳಿವೆ ಸರ್ಕಾರ ಮತ್ತು ಇನ್ನಿತರ ಸಹಯೋಗದೊಂದಿಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮಾಡಿದ್ದೆ ಆದಲ್ಲಿ, ಅವರ ಭವಿಷ್ಯ ಉಜ್ವಲವಾಗುತ್ತದೆ. ಈಗ ಇಲ್ಲಿ ಸೇರಿರುವ ನಾಡಿನ ವಿವಿಧ ಕ್ಷೇತ್ರದ ಗಣ್ಯರು ತಮ್ಮ ಸಲಹೆಗಳನ್ನು ಸಹಕಾರಗಳನ್ನು ನೀಡಿ ಪ್ರತಿ ತಿಂಗಳು ಈ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುವುದು ಅತ್ಯಂತ ಅವಶ್ಯಕ. ಮುಂದಿನ ತಿಂಗಳ ಕಾರ್ಯಕ್ರಮದ ಪ್ರಾಯೋಜಕತ್ವವನ್ನ ನಾವು ವಹಿಸಿಕೊಳ್ಳುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ, ನಾಟಕ, ಸಂಗೀತ, ಚಿತ್ರಕಲೆ, ಸಾಹಿತ್ಯ ಮತ್ತು ಸಾಮಾಜಿಕವಾಗಿ ಹಲವಾರು ವಿಷಯಗಳ ಚಿಂತನೆ ಮಾಡಲಾಯಿತು. ಇದನ್ನು ನಿರಂತರವಾಗಿ ಪ್ರತಿ ತಿಂಗಳು ವಿವಿಧ ಕಾರ್ಯಕ್ರಮಗಳ ಮೂಲಕ ಆಯೋಜಿಸಲು ತೀರ್ಮಾನಿಸಲಾಯಿತು.

ಹಿರಿಯ ಕಲಾವಿದರಾದ ವಿದ್ಯಾಧರ ಸಾಲಿಯವರು ಮಾತನಾಡುತ್ತಾ, ಸಾಹಿತ್ತಿಕ ಕಾರ್ಯಕ್ರಮಗಳಲ್ಲಿ ಚಿತ್ರ ಕಲಾವಿದರು, ಸಂಗೀತಗಾರರು, ನಾಟಕಕಾರರು, ಸಹಿತ ಎಲ್ಲ ಕಲಾವಿದರನ್ನು ಉದ್ಘಾಟಕರನ್ನಾಗಿ, ಅತಿಥಿಗಳನ್ನಾಗಿ, ಆಹ್ವಾನಿಸುವುದು ಅತ್ಯಂತ ಕಡಿಮೆ ಹಾಗೂ ವಿಷಾದದ ಸಂಗತಿ. ಇದರ ಬಗ್ಗೆ ಚಿಂತನೆ ಮಾಡುವುದು ಬಹಳ ಅವಶ್ಯಕತೆ ಸಾಹಿತಿಗಳಿಗೆ ಇರುವಷ್ಟು ಜನ ಬೆಂಬಲ ಹಾಗೂ ಸಾಂಸ್ಕೃತಿಕ ಬೆಂಬಲ ಎಲ್ಲ ಕಲಾವಿದರಿಗೂ ಸಿಗುವಂತಾಗಲಿ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಹಿರಿಯ ಕಲಾವಿದರಾದ ಪಿ.ಎಸ್.ಕಡೇಮನಿ ಮಾತನಾಡುತ್ತ, ರಾಜ್ಯದಲ್ಲಿರುವ ಎಲ್ಲ ಕಲಾಶಾಲೆಗಳಿಗೆ ಮರುಜೀವ ನೀಡಿ ಪೂರ್ಣಾವಧಿ ಉಪನ್ಯಾಸಕರನ್ನು ನೇಮಿಸಿ ಉತ್ತೇಜನಗೊಳಿಸಬೇಕು ಹಾಗೂ ಮಾಧ್ಯಮಿಕ ಶಾಲೆಗಲಲ್ಲಿ ಕಲಾಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಮೂಲಕ ಮಕ್ಕಳಲ್ಲಿರುವ ಸೂಕ್ತ ಕಲಾಚಟುಚಟಿಕೆಗಳಿಗೆ ಸರಕಾರಕ್ಕೆ ಆಗ್ರಹಮಾಡಿದರು. ಸಂಗಣ್ಣ ಪಾಟೀಲ, ಕಲಾವಿದ ರಮೇಶ ಚವಾಣ್, ವಿದ್ಯಾಧರ ಸಾಲಿ, ಡಾ. ಜಿ.ಎಸ್. ಭೂಸಗೊಂಡ, ಡಾ, ವಿ.ಎಂ.ಬಾಗಾಯತ್, ಶಿವಾನಂದ ಅಥಣಿ, ಯಾಮಿನಿ ಶಹಾ, ಮಹಾದೇವಿ ಕೊಪ್ಪದ, ಡಾ. ಶಶಿಕಲಾ ಹೂಗಾರ, ದಾಕ್ಷಾಯಣಿ ಇಮನಾದ, ಗಿರಿಜಾ ಪಾಟೀಲ, ಶಿವಣ್ಣ ಗೊಳಸಂಗಿ, ಶ್ರೀನಿವಾಸ ಸುಲಖೆ, ಆನಂದ ಮಹಾಂತಮಠ, ಭೀಮರಾಯ ಹಡಪದ, ಶಬ್ಬಿರ ನದಾಫ, ಇಂದ್ರಕುಮಾರ ದಸ್ತೆನ್ನವರ, ಡಾ. ಬಸವರಾಜ ಅನಗವಾಡಿ, ಸುಭಾಸಚಂದ್ರ ಕೆಂಭಾವಿ, ಸೇರಿದಂತೆ ಅನೇಕ ಗಣ್ಯರು, ಕಲಾವಿದರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿಸಿದರು. ವಿದ್ಯಾಧರ ಸಾಲಿ ವಂದನಾರ್ಪಣೆ ನೆರವೇರಿಸಿದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR